ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡುವ ಬಗ್ಗೆ

ಉಪಾಧ್ಯಕ್ಷಿಣಿಯವರು.—ಈಗ ನಿಯಮ ೬೮ರ ಮೇಲೆ ಅಲ್ಪ ಕಾಲಾವಧಿ ಚರ್ಚೆ. ಮಾನ್ಯ ಸದಸ್ಯರಾದ ಹೆಚ್. ವಿಕಾಂತಯ್ಯನವರು ನಿಯಮ ೬೮ರ ಮೇರೆಗೆ ಚರ್ಚೆಯನ್ನು ಪ್ರಾರಂಭಿಸಬೇಕು.

ಶ್ರೀ ಹೆಚ್. ವಿಕಾಂತಯ್ಯ.—ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ರೈತರ ಸಾಲದ ಮನ್ನಾ ಬಗ್ಗೆ...

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಮಾನ್ಯ ಉಪಾಧ್ಯಕ್ಷಿಣಿಯವರೇ ಚರ್ಚೆ ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಮಾನ್ಯ ಸದಸ್ಯರು ಸಾಲ ಮನ್ನಾ ಮಾಡುವುದರ ಬಗ್ಗೆ ಚರ್ಚೆಯನ್ನು ಮಾಡುವ ಮುನ್ನ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಅವರ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರೆ ನನಗೆ ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಈ ಒಂದು ವಿಷಯದ ಬಗ್ಗೆ ಈಗಾಗಲೇ ಸುಮಾರು ಮೂರು ಸಲ ಚರ್ಚೆಯಾಗಿ ಇದು ನಾಲ್ಕನೇ ಸಲದ ಚರ್ಚೆ ಎಂದು ನನಗನ್ನಿಸುತ್ತದೆ. ಕೇವಲ ಸಾಲ ಮನ್ನಾ ಆಗಬೇಕು ಸಾಲ ಮನ್ನಾ ಆಗಬೇಕು ಎಂದು ಹೇಳಿದರೆ, ಸಾಲ ಎಂದರೆ ಯಾವುದು ? ಯಾವ ಸಾಲ ಮನ್ನಾ ಆಗಬೇಕು ಏನನ್ನುವಂತಹ ಕೆಲವು ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನು ಯಾರಾದರೂ ಈ ಒಂದು ಚರ್ಚೆಯಲ್ಲಿ ಭಾಗವಹಿಸುತ್ತಾರೋ ಅವರು ತಮ್ಮ ಸ್ಪಷ್ಟವಾದ ನಿಲುಮೆಯನ್ನು ಹೇಳಬೇಕು. ಈಗ ಕೆಲವು ವಿಚಾರಗಳ ಬಗ್ಗೆ ತಮ್ಮನ್ನು ಕೇಳುತ್ತಿದ್ದೇನೆ. ಅದನ್ನು ತಾವು ಬರೆದುಕೊಂಡರೆ ಒಳ್ಳೆಯದು. ಆದರ ಮೇಲೆ ತಮ್ಮ ಅಭಿಪ್ರಾಯವನ್ನು ಹೇಳಬಹುದು. ಅಥವಾ ಆ ವಿಷಯದ ಮೇಲೆ ಬೇಕಾದಲ್ಲಿ ನನಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಒಂದನೆಯದು ಸಾಲ ಅಂದರೆ ಯಾವ ತರಹದ ಸಾಲ ? ಏಕೆಂದರೆ ಸಹಕಾರಿ ಕ್ಷೇತ್ರದಲ್ಲಿ ಮೂರು ತರಹದ ಸಾಲುಗಳು ಇವೆ. ಈಗ ನೀವು ವಿಚಾರ ಮಾಡುತ್ತಿರುವುದು ಸಹಕಾರಿ ಬ್ಯಾಂಕಿನ ಮುಖಾಂತರ ವಿತರಣೆ ಆದ ಸಾಲಗಳ ಬಗ್ಗೆ. ಸಹಕಾರಿ ಬ್ಯಾಂಕ್‌ಗಳ ಮುಖಾಂತರ ಕೊಟ್ಟಿರುವಂತಹ ಸಾಲಗಳು ಮೂರು ತರಹ. ಒಂದು ಅಲ್ಪಾವಧಿ ಸಾಲ, ಅಂದರೆ ಕ್ರಾಪ್ ಲೋನ್, ಎರಡನೆಯದು ಮಧ್ಯಮಾವಧಿ ಸಾಲ, ಮೂರನೆಯದು ದೀರ್ಘಾವಧಿ ಸಾಲ. ಸಾಲ ಮನ್ನಾ ಮಾಡುವಾಗ ಅಲ್ಪಾವಧಿ ಸಾಲವನ್ನು ಮನ್ನಾ ಮಾಡಬೇಕೋ, ಅಥವಾ ಮಧ್ಯಮಾವಧಿ ಸಾಲವನ್ನು ಮನ್ನಾ ಮಾಡಬೆ ಕೋ ಅಥವಾ ಎಲ್ಲಾ ರೀತಿಯ ಸಾಲವನ್ನು ಮನ್ನಾ ಮಾಡಬೇಕೋ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಇನ್ನು ಎರಡನೆಯ ವಿಚಾರ ಅಂದರೆ, ಸಾಲ ಮನ್ನಾ ಮಾಡಬೇಕಾದಾಗ ಕಟ್ ಆಫ್ ಡೇಟ್ ಇರಬೇಕು. ಎಲ್ಲಿಯವರೆಗೆ ಸಾಲ ಮನ್ನಾ ಮಾಡಬೇಕು ಮತ್ತು ಕಟ್ ಆಫ್ ಡೇಟ್ ಸಾಲ ಔಟ್ ಸ್ಟ್ಯಾಂಡಿಂಗ್ ಇರಬೇಕೋ ಅಥವಾ ಓವರ್ ಡ್ಯೂ ಇರಬೇಕೋ ಎಂದು ತಮ್ಮನ್ನು ಕೇಳುತ್ತಿದ್ದೇನೆ. ಯಾಕೆಂದರೆ ಶ್ರೀ ವಿಕಾಂತಯ್ಯನವರು ಸಹಕಾರ ಕ್ಷೇತ್ರದಲ್ಲಿ ಇದ್ದವರು ಮಾನ್ಯ ಮಂತ್ರಿಗಳಾಗಿದ್ದವರು. Let him enlighten me as to what should be the cut off date and as on that date, whether the amount outstanding or the whole loan should be waived off. ಸಾಲ ಮನ್ನಾ ಮಾಡಬೇಕಾಗಿದ್ದರೆ ಕಟ್ ಆಫ್ ಡೇಟ್ ದಿವಸದಿಂದ ಸಾಲ ಆಗಿರಬೇಕೇ ಅಥವಾ ಓವರ್ ಡ್ಯೂ ಆಗಿರಬೇಕೇ ? ಸಾಲ ತೆಗೆದುಕೊಂಡಿದ್ದು ಮನ್ನಾ ಆಗಬೇಕೋ ಅಥವಾ ಓವರ್ ಡ್ಯೂ ಸಾಲವನ್ನು ಮನ್ನಾ ಮಾಡಬೇಕೋ ಎಂಬ ಬಗ್ಗೆ ಒಂದು ಸ್ಪಷ್ಟೀಕರಣವನ್ನು ತಾವು ಕೊಡಬೇಕು. ಆಮೇಲಿಂದ period of default for waiver ಏನೆಂದರೆ ಸಾಲ ತೆಗೆದುಕೊಂಡು ಬಹುಶ; ೭ ವರ್ಷ ೮ ವರ್ಷ ೧೦ ವರ್ಷ ಆಗಿದೆ. ಅದನ್ನು ತಿರುಗಿ ಕೊಟ್ಟಿಲ್ಲ. ಕೆಲವರು ಒಂದು ವರ್ಷದಲ್ಲಿ ತೆಗೆದುಕೊಂಡಿದ್ದ ಸಾಲವನ್ನು ತಿರುಗಿ ಕೊಟ್ಟಿಲ್ಲ. ಮತ್ತೆ ಕೆಲವರು ಎರಡು ವರ್ಷ ಮೂರು ವರ್ಷಗಳಲ್ಲಿ ತೆಗೆದುಕೊಂಡಿದ್ದನ್ನು ಸಹ ತಿರುಗಿ ಕೊಡದೇ ಇರಬಹುದು. ಆದ್ದರಿಂದ ಯಾವ ಪೀರಿಯಡ್‌ನ ಸಾಲ ಮನ್ನಾ ಮಾಡಬೇಕು ಎಂಬ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು. ಸಾಲ ಮನ್ನಾ ಮಾಡಬೇಕು ಎಂದರೆ ಯಾವ ರೈತನ ಸಾಲ ಮನ್ನಾ ಮಾಡಬೇಕು, ಯಾರದ್ದು ಮಾಡಬಾರದು, ಎಂದು ಹೇಳಬೇಕು. ಏಕೆಂದರೆ ೧೦ ಸಾವಿರದ ಒಳಗಡೆ ತೆಗೆದುಕೊಂಡಿರುವಂತಹ ಸಾಲ ಮನ್ನಾ ಮಾಡಬೇಕು ಎಂದು ಒಂದು ವಾದ ಇದೆ, ಇನ್ನೊಂದು ವಾದ ಏನಿದೆ ಎಂದರೆ, ೧೦ ಸಾವಿರ ಅಥವಾ ೧೫ ಸಾವಿರ ಸಾಲ ಇದ್ದರೆ ಎಲ್ಲವನ್ನೂ ಮನ್ನಾ ಮಾಡಬೇಕು ಎಂದು ಕೆಲವರ ವಾದ ಇದೆ. ಆದ ಕ್ಕಾಗಿ ಸಾಲ ಮನ್ನಾ ಮಾಡಬೇಕಾಗಿದ್ದರೆ ಎಷ್ಟರ ಮಟ್ಟಿಗೆ ಸಾಲ ಮನ್ನಾ ಮಾಡಬೇಕು ಎಂದು ತಾವು

ಹೇಳಬೇಕು. who should be eligible for waiver? ಈ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕು, ಎಷ್ಟು ಸಾಲವನ್ನು ಮನ್ನಾ ಮಾಡಬೇಕೆಂಬುದನ್ನು ಸಹ ತಾವು ಸ್ಪಷ್ಟೀಕರಣ ಮಾಡಬೇಕು. ಕೇವಲ ೧೦ ಸಾವಿರದವರೆಗೆ ಇರುವಂತಹ ಸಾಲವನ್ನು ಮನ್ನಾ ಮಾಡಬೇಕೇ ಅಥವಾ ೧೧ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರೆ ೧೦ ಸಾವಿರ ಮಾತ್ರ ಮನ್ನಾ ಮಾಡಿ ಇನ್ನುಳಿದ ಒಂದು ಸಾವಿರ ರೂಪಾಯಿಯನ್ನು ಮಾತ್ರ ವಾಪಸ್ ತೆಗೆದುಕೊಳ್ಳಬೇಕೇ ಎಂಬುದರ ಬಗ್ಗೆ ತಾವು ವಿಚಾರ ಮಾಡಿ ತಿಳಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿಂದ ಸಾಲ ಮನ್ನಾ ಮಾಡುವುದು ಒಂದು ಬೇಡಿಕೆ. ಬಹುಶಃ ಕರ್ನಾಟಕ ರಾಜ್ಯದ ರೈತರಿಗೆ ಮಾತ್ರ ಸಾಲ ಇದೆ ಉಳಿದ ಕಡೆ ಸಾಲ ಇಲ್ಲವೆಂದು ಪ್ರಶ್ನೆ ಅಲ್ಲ. ಎಲ್ಲಾ ರಾಜ್ಯಗಳಲ್ಲಿ ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ. ಆದಕ್ಕೆ ನಮ್ಮ ಪ್ರಶ್ನೆ ಬರುವುದು ಏನೆಂದರೆ ಉತ್ತರ ಹಿಂದೂಸ್ಥಾನದಲ್ಲಿ ತೆಗೆದುಕೊಂಡ ಸಾಲದ ಕಡೆ ನಾವು ಹೋಗುವ ಹಾಗೆ ಇಲ್ಲ. ದಕ್ಷಿಣ ಹಿಂದೂಸ್ಥಾನದಲ್ಲಿ ನಮ್ಮ ನೆರೆ ರಾಜ್ಯದವರು ಯಾವ ರೀತಿ ಇದಕ್ಕೆ ನಿಯಮವನ್ನು ಮಾಡಿದ್ದಾರೆ. ಅದೇ ರೀತಿ ನಾವು ಮಾಡಬೇಕು. ಅಥವಾ ಅವರು ಯಾವುದೇ ರೀತಿಯಲ್ಲಿ ಮಾಡಿಕೊಳ್ಳಲಿ ನಾವು ನಮ್ಮದೇ ಆದ ಬೇರೆ ರೀತಿಯಲ್ಲಿ ಇರಬೇಕು ಎನ್ನುವುದು ತಮ್ಮ ವಿಚಾರ ಇದೆಯೇ ಎಂಬುದನ್ನು ತಾವು ಹೇಳಬೇಕು

ಇನ್ನೊಂದು ಬಹಳ ಗಹನವಾದಂಥ ವಿಚಾರ ತಮ್ಮ ಮುಂದೆ ಇಡುವುದು ಏನೆಂದರೆ, ಈಗ ಸಾಲ ಮನ್ನಾ ಮಾಡಬೇಕು ಸರಿ. ಈಗ ತಮಗೆ ಗೊತ್ತಿದೆ ಸಾಲ ಎಷ್ಟಿದೆ ಎಂಬುದು, ಇದನ್ನು ಮನ್ನಾ ಮಾಡಬೇಕು ಅಂದರೆ ಎಷ್ಟಾಗುತ್ತದೆ, ಕೇಂದ್ರ ಸರ್ಕಾರದವರು ಎಷ್ಟು ಕೊಡುವುದಕ್ಕೆ ಒಪ್ಪಿದ್ದಾರೆ. ನಾವು ಎಷ್ಟು ಕೊಡಬೇಕಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ತಾವು ಸಾಲ ಮನ್ನಾ ಮಾಡಬೇಕು ಅಂದಾಗ ಆ ದುಡ್ಡನ್ನು ನಾವು ಒದಗಿಸಬೇಕಲ್ಲ. ಈಗ ತಮ್ಮ ಮುಂದೆ ಬಜೆಟ್ ಇದೆ. ಆದ್ದರಿಂದ ಏನಪ್ಪ ನಮ್ಮದು ಬಜೆಟ್ ಇನ್ನೂ ಬಂದಿಲ್ಲ ಎನ್ನುವಂಥಾದ್ದು ಇಲ್ಲವೇ ಇಲ್ಲ. ಆದರೆ ಸಲುವಾಗಿ ಇವತ್ತು ತಾವು ಸಾಲ ಮನ್ನಾ ಮಾಡಬೇಕು ಎಂದು ಹೇಳುವ ಮುಂಚೆ ಈ ದುಡ್ಡನ್ನು ಯಾವ ರೀತಿಯಿಂದ, ಯಾವ ಬಾಬಿನಿಂದ ಕಟ್ ಮಾಡಬೇಕು, ಇದಕ್ಕೆ ಬೇಕಾದರೆ ಹೊಸ ಟ್ಯಾಕ್ಸ್ ಹಾಕಬೇಕೇ, ಈಗ ವೇವ್ ಮಾಡುವಂಥ ದುಡ್ಡು ಏನಿದೆಯೋ ಅದು ಎಲ್ಲಿಂದ ಬರಬೇಕು ಬಜೆಟ್‌ನಿಂದ ಬರಬೇಕಾಗಿದ್ದರೆ ಯಾವ ಬಾಬಿನಲ್ಲಿ ಇದನ್ನು ಕಟ್ ಮಾಡಿಕೊಂಡು ನಾವು ಕೊಡಬೇಕು ಎನ್ನುವಂಥಾದ್ದನ್ನು ತಾವು ನಮ್ಮ ಮುಂದೆ ಹೇಳಿದರೆ ಬಹುಶಃ ನನಗೆ ಉತ್ತರ ನೀಡುವುದಕ್ಕೆ ಅನುಕೂಲವಾಗುತ್ತದೆ, ಅದಕ್ಕಾಗಿ ಇವೆಲ್ಲವರ ಬಗ್ಗೆ ಬಹುಶಃ ಮಾನ್ಯ ವಿಕಾಂತಯ್ಯನವರನ್ನು ಹಿಡಿದುಕೊಂಡು ಮಾನ್ಯ ಯಡಿಯೂರಪ್ಪನವರನ್ನು ಹಿಡಿದುಕೊಂಡು ಯಾರ್ಯಾರು ಈ ಚರ್ಚೆಯಲ್ಲಿ ಭಾಗವಹಿಸುತ್ತಾ ಇದ್ದಾರೊ ಅವರೆಲ್ಲರೂ ನಾನು ಹೇಳಿರುವಂಥ ಇಷ್ಯೂಸ್ ಮೇಲೆ ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದರೆ ನಾನು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್. ವಿಕಾಂತಯ್ಯ.—ಮಾನ್ಯ ಉಪಾಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ನಮ್ಮನ್ನು ಗುರುತರವಾದಂಥ ಪರೀಕ್ಷೆಗೆ ಒಳಪಡಿಸಬೇಕು ಎಂಬ ಪ್ರಯತ್ನ ಮಾಡಿದ್ದಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ—ಸನ್ಮಾನ್ಯ ಮುಖ್ಯಮಂತ್ರಿಗಳು ತುಂಬ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ತುಂಬ ತೂಕದಿಂದ ಯೋಚನೆ ಮಾಡಿ ನಮ್ಮ ಸಲಹೆಯನ್ನು ನಾವು ಕೊಡಬೇಕಾಗುತ್ತದೆ. ಆದರೆ ತಾವು ನಮ್ಮ ಸಲಹೆ ಕೇಳುವುದಕ್ಕೆ ಮುಂಚೆ ತಾವು ಏನು ಮಾಡಬೇಕು ಎಂದು ಇದ್ದೀರಿ ಎನ್ನುವುದನ್ನು ಒಂದಷ್ಟು ಹೇಳಿದ್ದರೆ ನಾವು ತುಂಬ ಸುಲಭವಾಗಿ ಸಲಹೆಗಳನ್ನು ಕೊಡುತ್ತಿದ್ದೆವು

(ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್. ವಿಕಾಂತಯ್ಯ (ಚಿತ್ರದುರ್ಗ).—ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಏನಿದೆ, ಆದರ ಹಿನ್ನೆಲೆ ಏನಿದೆ ಅದನ್ನು ನಾನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡಿದ್ದೇನೆಂದು ಭಾವಿಸಿದ್ದೇನೆ. ಈ ದೇಶದಲ್ಲಿ ಏನಾಗಿದೆಯೆಂದರೆ ಈಗತಾನೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಕೆ.ಎಸ್.ಆರ್.ಟಿ.ಸಿ ನೌಕರರಿಗೆ ಸಂಬಳವನ್ನು ಹೆಚ್ಚು ಮಾಡಿದಾಗ ನಾವು ಅವುಗಳನ್ನು ಪರಿಗಣಿಸಲಿಲ್ಲ. ಈ ದೇಶದಲ್ಲಿರುವಂಥ ಸಂಘಟಿತ ಕಾರ್ಮಿಕರಿಗಾಗಲಿ ಅಥವಾ ಸುಶಿಕ್ಷಿತ ನೌಕರರಿಗಾಗಲೀ ಈ ದೇಶದ ಹಣದಿಂದ ಅವರಿಗೆ ನೆರವು ನೀಡುವಾಗ ನಾವು ಇದರ ಬಗ್ಗೆಯೂ ಆಲೋಚನೆ ಮಾಡಬೇಕು. ನಿಜ, ನಮ್ಮ ದೇಶದ ಬಜೆಟ್‌ನಲ್ಲಿ ಏನು ಹಣ ಇದೆ ಅದರಿಂದ ಯಾರು ನೊಂದಿದ್ದಾರೆ, ಯಾರು ಶೋಷಿತರಾಗಿದ್ದಾರೆ, ಯಾರಿಂ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮ ಸ್ಥಿತಿಯಲ್ಲಿಲ್ಲ ಅಂಥವರಿಗೆ ನೆರವು ನೀಡುವಂಥ ಕಾರ್ಯಕ್ರಮಗಳನ್ನು ನಾವು ರೂಪಿಸಿಕೊಳ್ಳಬೇಕಾಗಿದೆ. ಆ ದಿಶೆಯಲ್ಲಿ ನಾನು ಕೆಲವು ಅಭಿಪ್ರಾಯ

ಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಎಲ್ಲ ವಿಚಾರಗಳ ಬಗ್ಗೆಯೂ ಸಹ ನಾನು ಇವತ್ತಿನ ದಿವಸ ಹೇಳಲಿಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಈಗಾಗಲೇ ಈ ಸಭೆಯಲ್ಲಿ ಮೂರು ನಾಲ್ಕು ಸಾರಿ ಈ ರೈತರ ಸಾಲ ಮನ್ನಾದ ಬಗ್ಗೆ ನಾವು ಮಾತನಾಡಿದ್ದೇವೆ. ನಾನು ಸಕ್ರಿಯವಾಗಿ ಆಗ ಭಾಗವಹಿಸಲಿಲ್ಲ. ಆದಕ್ಕೆ ನನ್ನ ಅಭಿಪ್ರಾಯಗಳನ್ನು ಕೇಳುವಂಥ ಅವಕಾಶ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಿಕ್ಕಲಿಲ್ಲ ಎಂದು ನಾನು ಭಾವಿಸಿದ್ದೇನೆ. ನಾವು ಯಾವುದೇ ಒಂದು ಆಗ್ಗದ ಪ್ರಚಾರವನ್ನು ಪಡೆಯುವ ದೃಷ್ಟಿಯಿಂದ ಇವತ್ತಿನ ದಿವಸ ಈ ಒಂದು ರೈತರ ಸಾಲದ ಮನ್ನಾ ವಿಚಾರದ ಬಗ್ಗೆ ನಾವು ಚರ್ಚೆಯಲ್ಲಿ ಭಾಗವಹಿಸುತ್ತಾ ಇಲ್ಲ ಅದರ ಅವಶ್ಯಕತೆ ಇಲ್ಲ ಎಂದು ಭಾವಿಸಿದ್ದೇನೆ ಇವತ್ತಿನ ದಿವಸ ನಾವು ಈ ಚರ್ಚೆಯನ್ನು ಏಕೆ ಮಾಡುತ್ತಿದ್ದೇವೆ ಎಂಬ ಮಾತನ್ನು ನಾನು ಹೊಟ್ಟ ಮೊದಲಿಗ ಹೇಳುತ್ತೇನೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಆದು ಬಂದಿದೆ. ಕೇಂದ್ರ ಸರ್ಕಾರದವರು ಕೃಷಿ ಮತ್ತು ಗ್ರಾಮೀಣ ಸಾಲ ಯೋಜನೆಯನ್ನು ರೂಪಿಸಿದ್ದಾರೆ. ಬೇರೆ ಯೋಜನೆಗಳಂತೆ ಕೇಂದ್ರ ಸರ್ಕಾರ ಇದನ್ನು ಕೇಂದ್ರ ಪುರಸ್ಕೃತ ಯೋಜನೆ ಎಂದು ಕರೆಯಬಹುದು ಅಥವಾ ಬೇರೆ ಯಾವುದೇ ಹೆಸರಿನಿಂದ ಕರೆಯಲಿ, ಆ ಯೋಜನೆಯ ಅಡಿಯಲ್ಲಿ ಕೆಲವೊಂದು ಹಣವನ್ನು ಕೊಡಲಿಕ್ಕೆ ಅವರು ತಯಾರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಆ ಒಂದು ಯೋಜನೆಯ ರೂಪುರೇಷೆಗಳಿಗೆ ಹೋಗುವುದಕ್ಕೆ ಮುಂಚೆ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಇಂತಹ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿ ಮಾಡುವಾಗ ನಿಜವಾಗಲೂ ಸಹ ನಮ್ಮ ದೇಶದ ರೈತರು ನೊಂದಿದ್ದರೆ ಆರ್ಥಿಕವಾಗಿ ಸಂಕಷ್ಟ ಪರಿಸ್ಥಿತಿಯಲ್ಲಿದ್ದರೆ ಅವರಿಗೆ ಏತಕ್ಕೋಸ್ಕರ ಅವರು ಕೊಡುವ ನೆರವನ್ನು ಉಪಯೋಗಿಸಿಕೊಳ್ಳಲಿಕ್ಕೆ ನಮ್ಮ ಸರ್ಕಾರವು ಪ್ರಯತ್ನ ಮಾಡಬೇಕಾದು ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆಯೇ ಹೊರತು ಮತ್ತೆ ಯಾವುದೇ ದೃಷ್ಟಿಯಿಂದ ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತ ಅನೇಕ ವಿಚಾರಗಳನ್ನು ಕೇಂದ್ರ ಕೃಷಿ ಹಾಗೂ ಗ್ರಾಮೀಣ ಸಾಲ ಯೋಜನೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ಆದಕ್ಕಿಂತ ಮೊದಲು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ದೇಶದ ರೈತರ ಸಾಲ ಮನ್ನಾ ಮಾಡಬೇಕೆ, ಎನ್ನುವುದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಪ್ರೊ ನಂಜುಂಡ ಸ್ವಾಮಿಯವರು ಸಾಲ ಮನ್ನಾ ಆಗಿದೆಯೆಂದು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರು ಬೇರೆ ಅಭಿಪ್ರಾಯ ಹೊಂದಿದ್ದಾರೆ. ಇವರಿಬ್ಬರ ಮಧ್ಯೆದಲ್ಲಿ ನಾನು ಸಿಕ್ಕಿಕೊಂಡಿದ್ದೇನೆ. ಆ ಕಡೆ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ಈ ವಿಚಾರದಲ್ಲಿ ನಾನು ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಕೇಂದ್ರ ಕೃಷಿ ಗ್ರಾಮೀಣ ಋಣ ಪರಿಹಾರ ಯೋಜನೆಯನ್ನು ಜಾರಿಗೆ ತರುವಂಥ ಈ ಒಂದು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಬೇಕಾಗಿದೆಯೇ ಹೊರತು, ಮತ್ತೆ ಯಾವುದೇ ಆಗ್ಗದ ಪ್ರಚಾರ ಪಡೆಯುವುದಕ್ಕಾಗಿ ಅಲ್ಲ. ಈ ಯೋಜನೆಯ ರೂಪುರೇಷೆಗಳನ್ನು ನೋಡಿದಾಗ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿದ್ದಾರೆಂದು ನಾನು ಭಾವಿಸಿದ್ದೇನೆ. ಸರ್ಕಾರಕ್ಕೂ ಇದರ ಬಗ್ಗೆ ಮಾಹಿತಿ ಇದೆಯೆಂದು ನಾನು ಭಾವಿಸಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂಥ ಸ್ಪತಿ ಯೊಂದು ಅಂಶಗಳಿಗೂ ಉತ್ತರ ಇದೆ. ಉತ್ತರವನ್ನು ಹೊಸದಾಗಿ ಹೇಳಬೇಕಾಗಿಲ್ಲ. ಹಣ ಎಲ್ಲಿ ತರುತ್ತೀರಿ. ಸಾಲ ಅಂದರೆ ಏನು ? ಕರಾಪೆ ಅಂದರೆ ಏನು ? ಯಾರಿಗೆ ಕೊಡಬೇಕು ? ಎಷ್ಟು ಕೊಡಬೇಕು, ಇದರ ಬಗ್ಗೆ ಭಿನ್ನವಾದ ಅಭಿಪ್ರಾಯ ಇಲ್ಲ. ಯಾವ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ಮಾಡಿದೆ, ಆ ಯೋಜನೆಯಿಂದ ರೈತರಿಗೆ ಪರಿಹಾರ ಸಿಗುವುದಾದರೆ, ಅದನ್ನು ಪ್ರಾಮಾಣಿಕವಾಗಿ ಉಪಯೋಗಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಏತಕ್ಕೆ ಮಾಡಬಾರದೆಂದು ನಾನು ಹೇಳುತ್ತಿದ್ದೇನೆ ಒಂದು ವೇಳೆ ಉಪಯೋಗಿಸಿಕೊಳ್ಳಲಾದ ಸ್ಥಿತಿಯಲ್ಲಿದ್ದರೆ, ಹೆಚ್ಚಿನ ಹಣವನ್ನು ಯೋಜನೆಯಲ್ಲಿ ಪೊಟಕು ಮಾಡಲಿಕ್ಕೆ ನಮ್ಮ ಬೆಂಬಲ ಇದೆ. ಅದಕ್ಕೆ ನಾವು ತಯಾರಿದ್ದೇವೆ. ಇವತ್ತು ಈ ದೇಶದಲ್ಲಿ ಸುಶಿಕ್ಷಿತ ಜನ ಯಾರಿದ್ದಾರೆ, ಸುಸಂಘಟಿತ ಜನ ಯಾರಿದ್ದಾರೆ, ಆರ್ಥಿಕವಾಗಿ ಉತ್ತಮವಾದಂಥ ಜನ ಯಾರಿದ್ದಾರೆ, ಅಂಥ ಒಂದು ವರ್ಗಕ್ಕೆ ನೆರವು ಕೊಡುವುದಕ್ಕೆ ಸರ್ಕಾರ ತಯಾರಿರುವಾಗ, ಸಂಕಷ್ಟದಲ್ಲಿರ ತಕ್ಕ ರೈತ ವರ್ಗಕ್ಕೆ ನೆರವು ಕೊಡುವುದಕ್ಕೆ ಯಾವುದೇ ಒಂದು ಕಾನೂನು ಅಡ್ಡಿ ಬರಬಾರದು. ಸರ್ಕಾರ ೨೦೦೦ ಕೋಟಿ ರೂಪಾಯಿಗಳನ್ನು ರೈತವರ್ಗಕ್ಕೆ ಸಾಲವಾಗಿ ಕೊಟ್ಟಿದೆ. ಆ ಪೈಕಿ ೧೫೦೦ ಕೋಟಿ ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಕೊಡಲಾಗಿದೆ. ಸುಮಾರು ೬೫೦ ಕೋಟಿ ರೂಪಾಯಿಗಳನ್ನು ಸಹಕಾರ ಸಂಘಗಳ ಮುಖಾಂತರ ಸಾಲ ಕೊಡಲಾಗಿದೆ. ಇವತ್ತು ಈ ದೇಶದಲ್ಲಿ ಕೃಷಿ ಉತ್ಪನ್ನ ಹೆಚ್ಚಾಗಬೇಕಾದರೆ, ಕೃಷಿಕರ ಉತ್ಪಾದನೆ ಹೆಚ್ಚಾಗಬೇಕಾದರೆ ಕೃಷಿಕರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕಾದರೆ ಅವನಿಗೆ ಹೆಚ್ಚಿನ ಸಾಲ ಸೌಲಭ್ಯದ ಅವಶ್ಯಕತೆ ಇದೆ. ಕೇವಲ ಸಾಲ ಮನ್ನಾ ಮಾಡುವುದರಿಂದ ಅವನ ಜೀವನ ಮಟ್ಟ ಉತ್ತಮವಾಗುವುದಿಲ್ಲ. ಸಾಲ ಮನ್ನಾ ಮಾಡು

ವುದರ ಜೊತೆಗೆ ಅವನ ಉತ್ಪಾದನೆಯನ್ನು ಹೆಚ್ಚುಮಾಡಲಿಕ್ಕೆ ಬೇಕಾದಂಥ ಸಾಲ ಸೌಲಭ್ಯ ಕೂಡ ವಿಸ್ತರಣೆಯಾಗಬೇಕು. ಈ ದಿಶೆಯಲ್ಲಿ ಯೋಚನೆ ಮಾಡಿದಾಗ, ಇವತ್ತು ರಾಜ್ಯದಲ್ಲಿರತಕ್ಕ ರೈತರಿಗೆ ಶೇಕಡಾ ೧೦–೧೨ ರಷ್ಟು ಸಹಕಾರ ಸಂಘಗಳ ಮುಖಾಂತರ ಸಾಲ ಕೊಡುತ್ತಿದ್ದೇವೆ. ಅವನ ಅವಶ್ಯಕತೆಗೆಅನುಗುಣವಾಗಿ ಶೇಕಡ ೧೦–೧೫ರಷ್ಟು ಸಾಲ ಕೊಡುತ್ತಿದ್ದೇವೆ. ೧೯೮೯–೯೦ನೇ ಸಾಲಿನಲ್ಲಿಸಹಕಾರಿ ಸಂಘಗಳ ಮೂಲಕ ೨೭೦ ಕೋಟಿ ರೂಪಾಯಿ ಸಾಲ ಕೊಟ್ಟಿದ್ದೇವೆ. ವಾಣಿಜ್ಯ ಬ್ಯಾಂಕುಗಳು ಮತ್ತು ಇತರ ಬ್ಯಾಂಕುಗಳ ಮೂಲಕ ೩೦೦ ಕೋಟಿ ರೂಪಾಯಿಗಳ ಸಾಲ ಕೊಟ್ಟಿದ್ದೇವೆ. ಸಾಲ ವಿತರಣೆ ಯೇಗೆ ಆಗಬೇಕು ಎನ್ನುವುದನ್ನು ಕೂಡ ನಾವು ನೋಡಬೇಕಾಗಿದೆ. ಇವತ್ತು ರಾಜ್ಯದ ರೈತನ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ೧೯೮೮–೮೯ರಲ್ಲಿ ೨೭೦ ಕೋಟಿ ರೂಪಾಯಿ ಸಾಲ ವಿತರಣೆ ಮಾಡಲು ಸಾಧ್ಯವಾಗಿದೆ. ೧೯೮೯–೯೦ರಲ್ಲಿ ೨೯೦ ರಿಂದ ೩೦೦ ಕೋಟಿ ಸಾಲ ವಿತರಣೆ ಮಾಡಲಾಗಿದೆ. ಆದರೆ, ೧೯೯೦-೯೧ನೇ ಸಾಲಿನಲ್ಲಿ ಸಾಲ ಮನ್ನಾ ಮಾಡುವ ಮಾತು ಬಂದಮೇಲೆ, ಸದನದ ಒಳಗೆ ಮತ್ತು ಹೊರಗಡೆ ಈ ವಿಚಾರ ಬಂದಾಗ ಆಗಿರುವಂಥ ದುಃಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ೧೯೯೧ರ ಏಪ್ರಿಲ್‌ನಲ್ಲಿ ಕೇವಲ ೩೯–೪೦ ಕೋಟಿ ಸಾಲ ಕೊಟ್ಟಿದ್ದೇವೆ. ಆದರೆ, ೧೯೯೦ನೇ ಏಪ್ರಿಲ್‌ನಲ್ಲಿ ಆದರ ಸಾಲ್ಕನೇ ಒಂದರಷ್ಟು ಕೂಡ ಸಾಲ ಕೊಡುವುದಕ್ಕೆ ಸಾಧ್ಯವಾಗಿಲ್ಲ. ವಿತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೇವಲ ಸಾಲ ಮನ್ನಾ ಮಾಡುವುದರಿಂದ ರೈತರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಿಲ್ಲ. ಅವನಿಗೆ ಬೇಕಾದಂಥ ಸಾಲ ಸೌಲಭ್ಯಗಳನ್ನು ಕಡಿಮೆ ಬಡ್ಡಿದರದಲ್ಲಿ, ಸುಲಭ ಬಡ್ಡಿದರದಲ್ಲಿ ಕೊಡತಕ್ಕ ಮನೋಭಾವನೆ ನಮ್ಮಲ್ಲಿ ಬರಬೇಕಾಗಿದೆ. ಇವತ್ತು ಬೆಳೆಯಿತಕ್ಕ ಜನಸಂಖ್ಯೆ ವೇಗವನ್ನು ನೋಡಿದರೆ, ೨೦೦೦ದ ಇಸವಿ ವೇಳೆಗೆ ರೈತನ ಉತ್ಪಾದನೆಯಲ್ಲಿ ಕುಂಠಿತವಾಗುವುದರ ಜೊತೆಗೆ ಜನಸಂಖ್ಯೆಗೆ ಅನುಗುಣವಾಗಿ ದವಸಧಾನ್ಯಗಳನ್ನು ಬೆಳೆಯಲಿಕ್ಕೆ ಆಗದಂಥ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗುತ್ತದೆ.

೫–೧೫ ಪಿ.ಎಂ.

ಈ ದಿಸೆಯಲ್ಲಿ ಇಪ್ಪೊತ್ತಿನ ದಿವಸ ಈ ಒಂದು ಸಾಲದ ವಿತರಣೆ ಮಾಡಬೇಕಾದರೆ ಸಾಲದ ವಸೂಲಿ ಕೂಡ ಚೆನ್ನಾಗಿ ಆಗಬೇಕು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅನೇಕರು ನಾನು ಆದಕ್ಕೆ ಅನುಮೋದನೆ ನೀಡಿದ್ದೇನೆ. ಇದರಲ್ಲಿ ಅಗ್ಗದ ಪ್ರಚಾರ ಅಥವಾ ನಮ್ಮನ್ನು ನಿಷ್ಠೂರ ಮಾಡುತ್ತಾರೆಂಬ ಹೆದರಿಕೆ ನಮಗೇನೂ ಇಲ್ಲ. ಆದರೆ ವಸೂಲಿ ಅಂಶವನ್ನು ಗಮನಿಸಿದ್ದೇ ಆದರೆ ೧೯೮೯ರಲ್ಲಿ ಏನು ಎಸ್‌ಟಿಲೋನ್, ಎಂಟೆ ಲೋನ್ ಮತ್ತು ಎಲ್‌ಟಿ ಲೋನ್ ವಸೂಲಿ ಆಯಿತೋ, ಅದನ್ನು ಗಮನಕ್ಕೆ ತೆಗೆದುಕೊಂಡಾಗ ಶೇಕಡಾ ೪೮ ರಷ್ಟು ಅಲ್ಪಾವಧಿ ಸಾಲ, ಶೇಕಡಾ ೩೬ ರಷ್ಟು ಮಧ್ಯಮಾವಧಿ ಸಾಲ, ಶೇಕಡಾ ೬೦ ರಷ್ಟು ದೀರ್ಘಾವಧಿ ಸಾಲ ವಸೂಲಿ ಆಯಿತು. ಆದರೆ ೩೦–೪೯–೯೦ ರಲ್ಲಿ ಸಾಲದ ವಸೂಲಾತಿಯನ್ನು ಗಮನಿಸಿದಾಗ ಗಣನೀಯವಾಗಿ ಸಾಲದ ವಸೂಲಿ ಕಡಿಮೆಯಾಗಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ೧೨ ರಿಂದ ೨೬ ಮತ್ತು ೧೭ ಈ ರೀತಿ ಅನುಕ್ರಮವಾಗಿ ಕಡಿಮೆಯಾಗಿದೆ. ವಸೂಲಾತಿ ಕಡಿಮೆಯಾಗಿರುವುದರ ಜೊತೆಗೆ ಸಾಲದ ವಿತರಣೆ ಕೂಡ ಕಡಿಮೆಯಾಗಲಿಕ್ಕೆ ಸಾಧ್ಯವಾಗಿದೆ. ಇದರ ಅರ್ಥ ಏನೆಂದರೆ, ಯಾರು ಈ ದೇಶದಲ್ಲಿ ಸುಲಭ ದರದಲ್ಲಿ ಏನು ಸಹಕಾರ ಸಂಘದ ಸಾಲ ದೊರೆಯುತ್ತಿತ್ತು ಆ ಸಾಲ ದೊರೆಯದಂಥ ಪರಿಸ್ಥಿತಿ ಈ ಸಾಲ ಮನ್ನಾ ಯೋಜನೆ ಅಡಿಯಲ್ಲಿ ಉದ್ಭವವಾಗಿದೆ ಅಂದರೆ ತಪ್ಪಾಗಲಾರದು. ಯಾವುದೋ ದೇಶದ ಆರ್ಥ ವ್ಯವಸ್ಥೆಯನ್ನು ನಾವು ಗಮನದಲ್ಲಿಟ್ಟುಕೊಂಡು ಆ ಒಂದು ಆರ್ಥ ವ್ಯವಸ್ಥೆಯಿಂದ ಈ ದೇಶದ ಎಲ್ಲ ಜನರಿಗೂ ಅನಾಯವಾಗದಂಥ ರೀತಿಯಲ್ಲಿ ನೋಡಿಕೊಳ್ಳುವ ದೃಷ್ಟಿಯಿಂದ ನಾವು ನಮ್ಮ ಒಂದು ನೀತಿಯನ್ನು ನಿರೂಪಿಸಿಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಕೇಂದ್ರ ಸರ್ಕಾರ ಯೋಚಿಸಿದಂಥ ಕೃಷಿ ಮತ್ತು ಗ್ರಾಮೀಣ ಸಾಲದ ಯೋಜನೆಯ ರೂಪರೇಷೆಗಳನ್ನು ನಾವು ತಿಳಿದುಕೊಳ್ಳುವುದಕ್ಕಿಂತಲೂ ಮುಂಚಿತವಾಗಿ ಅವರು ಒಂದು ಮಾತನ್ನು ಹೇಳುತ್ತಿದ್ದರು. ಏನೆಂದರೆ ಏನಾದರೂ ಸಾಲವನ್ನು ಮನ್ನಾ ಮಾಡಿದ್ದೇ ಆದರೆ ಸುಮಾರು ೨೬೦ ಕೋಟಿ ರೂಪಾಯಿಗಳು ನಮಗೆ ಬೇಕಾಗಬಹುದೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಆದರೆ ಇವೊತ್ತಿನ ದಿವಸ ಏನು ಒಂದು ಹೊಸ ಯೋಜನೆ ಬಂದಿದೆ ಆ ಯೋಜನೆಯ ಅಡಿಯಲ್ಲಿ ಏನು ಅವರು ವ್ಯಾಖ್ಯಾನ ಮಾಡಿದ್ದಾರೆ ಆ ವ್ಯಾಖ್ಯಾನ ಮಾಡಿದಂಥ ಸಾಲಗಾರ ಏನಿದ್ದಾನೆ, ಅದರ ಒಂದು ಆರ್ಥ ವಿವರಣೆಯನ್ನು ನೋಡಿದಾಗ ಯಾವುದು ಸಾಲ ಎಂದು ಹೇಳಿದ್ದಾರೆ. ಆದರೆ ಆರ್ಥ ವಿವರಣೆಯನ್ನು ನೋಡಿದಾಗ ಮತ್ತು ಯಾರನ್ನು ಸುಸ್ತಿದಾರ ಎಂದು ಹೇಳಿದ್ದಾರೆ ಅದರ ಆರ್ಥ ವಿವರಣೆಯನ್ನು ನೋಡಿದಾಗ ಇದರ ವಿವರಗಳು ಗೊತ್ತಾಗುತ್ತದೆ. ನಾನು ಎಲ್ಲಾ ಆರ್ಥ ವಿವರಣೆಯನ್ನು ಸಮಿಪರ್ಸಾಂಗಿ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಅವನ್ನು

ಗವನಿಸಿರ ಬಹುದೆಂದು ನಾನು ಭಾವಿಸಿದ್ದೇನೆ. ಈ ದಿಸೆಯಲ್ಲಿ ಏನು ಈ ಒಂದು ಯೋಜನೆಯಡಿಯಲ್ಲಿ ಅರ್ಥ ವಿವರಣೆ ಮಾಡಿದ್ದಾರೆ ಆ ಅರ್ಥ ವಿವರಣೆಯಡಿಯಲ್ಲಿ ಸಹ ನಮ್ಮ ರಾಜ್ಯದ ರೈತರಿಗೂ ಸಾಲದ ಮನ್ನಾ ಪರಿಹಾರ ಕೊಡಲಿಕ್ಕೆ ಸಾಧ್ಯವಾದರೆ ಅದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಅದಕ್ಕೆ ಹೊರತಾಗಿ ಸಾಲವನ್ನು ಕೊಡಲಿಕ್ಕೆ ಯಾವುದೇ ಒಂದು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಲಿಕ್ಕಿಲ್ಲ ಎಂದು ನಾನು ಒಪ್ಪುತ್ತೇನೆ. ಇವತ್ತಿನ ದಿವಸ ಈ ಒಂದು ಅರ್ಥ ವಿವರಣೆಯಲ್ಲಿ ಏನು ಪರಿಹಾರ ಸಿಕ್ಕುತ್ತದೆ ಆ ಒಂದು ಪರಿಹಾರದ ಮೊಬಲಗನ್ನು ಅಂದಾಜು ಮಾಡಿದರೆ ಆದು ಕೇವಲ ೬೦ ರಿಂದ ೭೦ ಕೋಟಿ ರೂಪಾಯಿಗಳಾಗಬಹುದೆಂದು ನಾನು ಭಾವಿಸಿದ್ದೇನೆ. ಏಕೆಂದರೆ ೩೫೦ ಕೋಟಿ ರೂಪಾಯಿಗಳಿಂದು ಹಿಂದೆ ಅಂದಾಜು ಮಾಡಿದ್ದರೂ ಸಹ ಇವೊತ್ತಿನ ಅಂಕಿಅಂಶಗಳ ಪ್ರಕಾರ ಮತ್ತು ಇವೊತ್ತಿನ ಈ ಪದಗಳ ಅರ್ಥ ವಿವರಣೆಯನ್ನು ನಾವು ಗಮನಕ್ಕೆ ತೆಗೆದುಕೊಂಡಾಗ ೧೨೦-೧೫೦ ಕೋಟಿ ರೂಪಾಯಿಗಳನ್ನು ನಾವು ಕೊಡಬೇಕಾಗುತ್ತದೆ. ಅದರಲ್ಲಿ ಶೇಕಡಾ ೫೦ ರಷ್ಟು ಕೇಂದ್ರ ಸರ್ಕಾರ ಕೊಡಲಿಕ್ಕೆ ಒಪ್ಪಿರುವುದರಿಂದ, ಈ ಒಂದು ಯೋಜನೆಯಡಿಯಲ್ಲಿ ನಮ್ಮ ಸರ್ಕಾರಕ್ಕೆ ೬೦ ರಿಂದ ೭೦ ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಬಹುದೆಂದು ನಾನು ಅಂದಾಜು ಮಾಡಿದ್ದೇನೆ. ಅದೇನಾದರೂ ತಪ್ಪಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಸರಿಪಡಿಸಬೇಕು. ರಾಜ್ಯದ ಎಲ್ಲಾ ರೈತರಿಗೆ ಸಾಲ ಮನ್ನಾ, ಪರಿಹಾರ ಕೊಡುತ್ತೇವೆಂದರೆ ಅದು ಸಾಧ್ಯವಿಲ್ಲದ ಮಾತು ನಮ್ಮ ದೇಶದಲ್ಲಿರುವ ರೈತರು ಯಾವ ಸಾಲವನ್ನು ಮಾಡಿದ್ದಾರೆ ಅದು ಸಹಕಾರಿ ಸಾಲ ಇರಬಹುದು, ವಾಣಿಜ್ಯ ಬ್ಯಾಂಕ್ ಸಾಲ ಇರಬಹುದು ಅಥವಾ ಬೇರೆ ಯಾವುದೇ ರೀತಿಯ ಸಾಲ ಇರಬಹುದು. ಆ ಸಾಲವನ್ನೆಲ್ಲಾ ಮನ್ನಾ ಮಾಡಬೇಕೆಂಬ ಮಾತನ್ನು ನಾನು ಹೇಳಲಿಲ್ಲ. ಕೇಂದ್ರ ಸರ್ಕಾರ ಈಗಾಗಲೇ ಈ ಒಂದು ಯೋಜನೆ ಸಿದ್ಧಪಡಿಸಿರುವುದರಿಂದ ನಮ್ಮ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡರೆ ಸ್ವಲ್ಪಮಟ್ಟಿಗಪರಿಹಾರ ಸಿಕ್ಕುತ್ತದೆ. ಆ ಒಂದು ದಿಸೆಯಲ್ಲಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಈ ಸಾಲ ಮನ್ನಾ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಇದಕ್ಕೆ ಮೂಲಭೂತ ಕಾರಣ ಏನಿದೆ ಅದನ್ನು ಸಹ ಈ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ರೈತರ ಸಾಲ ಮನ್ನಾ ಮಾಡಬೇಕಾದ ಪರಿಸ್ಥಿತಿ ಬಂದಿದೆ ಅಂದರೆ ತವಂಗೆಲ್ಲಾ ಗೊತ್ತಿರುವಹಾಗೆ, ಅನೇಕ ಸಂದರ್ಭದಲ್ಲಿ ಅನೇಕ ಹಿರಿಯ ಸದಸ್ಯರು ಮತ್ತು ಎಲ್ಲಾ ಕಾಲದಲ್ಲೂ ಸಹ ಈ ಸಭೆಯಲ್ಲಿಯೇ ಮಾತ್ರವಲ್ಲ, ಈ ಹಿಂದಿನ ಸಭೆಯಲ್ಲೂ ಸಹ ಅನೇಕ ಸಂದರ್ಭಗಳಲ್ಲಿ ಪಾಟೀಲ್‌ರವರು ಸಹ ಏನು ಹೇಳಿದ್ದಾರೆಂದರೆ ರೈತನಿಗೆ ಎಲ್ಲಿಯವರೆಗೆ ನಾವು ಅವನು ಬೆಳೆದಂಥ ಬೆಳೆಗಳಿಗೆ ನ್ಯಾಯವಾದಂಥ ಬೆಲೆಯನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಅಲ್ಲಿಯವರೆಗೆ ಒಂದು ಲಾಭದಾಯಕ ವೃತ್ತಿಯಲ್ಲಿ ಅವನು ತೊಡಗಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಅನೇಕ ಯೋಜನೆಗಳನ್ನು ರೂಪಿಸುತ್ತೇವೆ. ೧೯೮೯-೯೦ರಲ್ಲಿ ಒಂದು ಪ್ರೊಕ್ಯೂರ್‌ಮೆಂಟ್ ಪಾಲಿಸಿಯನ್ನು ಮಾಡಿದ್ದೆವು. ಭತ್ತ, ರಾಗಿ ಮುಂತಾದ ಬೆಳೆಗಳ ಬೆಲೆ ಕಡಿಮೆಯಾದಾಗ ಅದನ್ನು ಸರ್ಕಾರವೇ ಕೊಂಡುಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದೇವೆ.

ಅಂತಹ ನೀತಿಯನ್ನು ಈ ಹಿಂದೆ ಸರಕಾರ ಪ್ರಕಟ ಮಾಡಿತ್ತು. ಆದರೆ ರೈತ ಬೆಳೆದಂತಹ ರಾಗಿಯನ್ನು ೧೪೦ ರೂಪಾಯಿಗೆ ಕೊಂಡು ಕೊಳ್ಳಲಿಕ್ಕೆ ಮುಂದೆ ಬರಲಿಲ್ಲ ಸರಕಾರ ಈ ಬಗ್ಗೆ ಎಲ್ಲಿಯವರೆಗೆ ತನ್ನ ದೃಢವಾದ ನೀತಿಯನ್ನು, ರೈತರಿಗೆ ಸಹಾಯವಾಗುವಂತಹ ನೀತಿಯನ್ನು ರೂಪಿಸಿ ಜಾರಿಗೆ ತರಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ರೈತನಿಗೆ ಲಾಭ ಸಿಗುವುದಿಲ್ಲ. ರೈತರು ಅಂತಹ ದಂಸ್ಥಿತಿಯಲ್ಲಿಯೇ ಇರಬೇಕಾಗುತ್ತದೆ. ರೈತನಿಗೆ ಬೆ.ಕಾದಂತಹ ವಿದ್ಯುತ್ ಪೂರೈಕೆಯಾಗಲೀ, ಅಥವಾ ಸುಲಭ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸುವಂತಹ ವ್ಯವಸ್ಥೆಯನ್ನಾಗಲೀ ಸರಕಾರ ಕೊಡಲೇ ಮಾಡಬೇಕು. ಇಲ್ಲದಿದ್ದರೆ ನಾನಾ ರೀತಿಯ ದುರಂತವನ್ನು ನಾವು ಎದುರು ನೋಡಬೇಕಾಗುತ್ತದೆ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಯಾವುದೇ ಶೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಕೆಲವು ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೇಂದ್ರದ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನವರ ಸಲಹೆಯ ಪ್ರಕಾರ ಮತ್ತು ಆವರ ಯೋಜನೆ ಏನು ಇದೆ ಅದರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಿಂದಿನ ಸರಕಾರವಿದ್ದಾಗ ರೈತರಿಗೆ ಬೇಕಾದಂತಹ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ಅಥವ ಬಡ್ಡಿಯ ರಿಯಾಯಿತಿಯನ್ನು ನಾವು ಕೊಟ್ಟಿದ್ದೆವು. ಸಾಲವನ್ನು ಮನ್ನಾ ಮಾಡುವುದಕ್ಕಿಂತ ಹೆಚ್ಚಾಗಿ ಒಂದು ನೀತಿಯನ್ನು ತಾವು ಅನುಸರಿಸಿದರೆ ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಕವಾಗಿ ಎಲ್ಲಾ ವರ್ಗದ ರೈತರಿಗೆ ಉಪಯೋಗವಾಗಬಹುದು. ಅದರ ಬಗ್ಗೆ ತಾವು ಗಟ್ಟಿಯಾದಂತಹ ಆಲೋಚನೆ ಮನಸ್ಸು ಮಾಡಬೇಕು ಮತ್ತು ತೆರೆದ ಹೃದಯದಿಂದ ಇದನ್ನು ಮಾಡಬೇಕಾಗುತ್ತದೆ. ಕೇವಲ ಸಣ್ಣ

ಮತ್ತು ಅತಿ ಸಣ್ಣ ರೈತರಿಗೆ ಈ ಯೋಜನೆಯನ್ನು ಜಾರಿಮಾಡಬೇಕೆಂದಿದ್ದೀವೆಂದು ಹಿಂದೆ ಹೇಳಿದ್ದೀರಿ ನೂರಕ್ಕೆ ೫ ಜನ ದೊಡ್ಡ ರೈತರು ಇರಬಹುದು ಎಲ್ಲರೂ ದೊಡ್ಡ ರೈತರು ಇರುವುದಿಲ್ಲ. ಅವರನ್ನು ಹೊರತು ಪಡಿಸಿ ಮಾಡುವುದು ಸರಿಯಲ್ಲ. ಯಾವನೇ ರೈತನಿರಲಿ, ಟ್ರಾಕ್ಟರ್ಸ್ ಮುಂತಾದ ಉಪಕರಣಗಳನ್ನು ಉಪಯೋಗ ಮಾಡಿ ಉತ್ಪಾದನೆ ಮಾಡಿದರೂ ಕೂಡ ಆ ಬೆಳೆಗೆ ತಕ್ಕಂತಹ ನ್ಯಾಯವಾದ ಬೆಲೆ ಸಿಕ್ಕದೇ ಇರುವುದರಿಂದಾಗಿ ಉತ್ತಮವಾದ ಪರಿಸ್ಥಿತಿಯಲ್ಲಿ ಅವರು ಇರಲಿಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗುತ್ತದೆ. ಸಮಸ್ಯೆಲ್ಲಿ ಮತ್ತೊಂದು ಕೆಟ್ಟ ಪ್ರವೃತ್ತಿ ಬೆಳೆಯುತ್ತಿದೆ. ಹೆಚ್ಚು ಹೆಚ್ಚು ಸಾಲವನ್ನು ಕೊಡುವುದರ ಜೊತೆಗೆ ಹೆಚ್ಚು ಹೆಚ್ಚು ಬಡ್ಡಿಯನ್ನು ವಸೂಲು ಮಾಡುವ ಬಗ್ಗೆ ಸಹಕಾರ ಸಂಘ ಸಂಸ್ಥೆಗಳಾಗಲೀ ಸರಕಾರವಾಗಲೀ ಯೋಚನೆ ಮಾಡುತ್ತಿದೆ ಎಂದರೆ ತಪ್ಪಾಗುವುದಿಲ್ಲ. ನಬಾರ್ಡ್‌ನವರಿಂದ ಏನು ಹಣ ಬರುತ್ತದೆ ಅದು ಅಂತಿಮವಾಗಿ ರೈತರಿಗೆ ಮುಟ್ಟುವಾಗಾದರೆ ೧೦ ರಿಂದ ೧೪ ಪರ್ಸೆಂಟ್ ಬಡ್ಡಿ ಆಗುತ್ತದೆ. ಈ ಬಡ್ಡಿಯ ದರದ ಅಂತರ ಏನು ಇದೆ ಇದನ್ನು ಕಡಿಮೆ ಮಾಡಬೇಕು. ಮಧ್ಯವರ್ತಿಗಳಾಗಿ ಅಪೆಕ್ಸ್ ಬ್ಯಾಂಕ್ ಇರಬಹುದು ಇಲ್ಲವೇ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು ಇರಬಹುದು ಇವರು ಮಧ್ಯಂತರದಲ್ಲಿ ಹೆಚ್ಚು ಬಡ್ಡಿಯನ್ನು ವಸೂಲು ಮಾಡುತ್ತಾರೆ. ಇದನ್ನು ನಿಲ್ಲಿಸಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಇದರ ಜೊತೆಯಲ್ಲಿ ನಬಾರ್ಡ್‌ನವರು ಕೈಗಾರಿಕೋದ್ಯಮಿಗಳಿಗೆ ಯಾವ ರೀತಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಾರೆ ಅದೇ ರೀತಿಯಾಗಿ ರೈತರಿಗೂ ಕೂಡ ಕೃಷಿ ಉತ್ಪನ್ನಗಳಗೆಂದು ಸಾಲವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಬಹುದು. ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಸಾಲವನ್ನು ಒದಗಿಸುವ ಬಗ್ಗೆ ಹೊಸ ಯೋಜನೆಯನ್ನು ರೂಪಿಸ ಬೇಕಾಗುತ್ತದೆ. ಕೇಂದ್ರ ಸರಕಾರದವರು ಏನು ಯೋಜನೆ ರೂಪಿಸಿದ್ದಾರೆ ಅದರ ಅಡಿಯಲ್ಲಿ ರೈತರಿಗೆ ಸಾಲವನ್ನು ಮನ್ನಾ ಮಾಡುವುದರ ಮುಖೇನ ಅವರಿಗೆ ಸಹಾಯವನ್ನು ಮಾಡಬೇಕು. ರೈತರಿಗೆ ಸಹಕಾರಿ ಸಂಸ್ಥೆಗಳ ಮೂಲಕ ನೀಡುವಂತಹ ಬಡ್ಡಿ ರಿಯಾಯಿತಿಯನ್ನು ರದ್ದು ಮಾಡಿದ್ದೇವೆಂದು ತಾವು ಏನು ಹೇಳಿದ್ದಿರಿ ಅದನ್ನು ಪುನರ್ ಪರಿಶೀಲಿಸಬೇಕು. ವಾಣಿಜ್ಯ ಬ್ಯಾಂಕ್‌ಗಳ, ಸಹಕಾರ ಸಂಸ್ಥೆಗಳ ಸಾಲದಲ್ಲಿ ನಮ್ಮ ರೈತರು ಸಿಲುಕಿ ನರಳುವುದು ಸರಿಯಲ್ಲ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸಬೇಕು. ಇದರಿಂದ ಅವರು ಬೇಗನೆ ಸಾಲದಿಂದ ಋಣಮುಕ್ತರಾಗಲು ಅವಕಾಶವಾಗುತ್ತದೆ. ನೀವು ಅವರಿಗೆ ಸರಿಯಾದಂತಹ ಸಾಲವನ್ನು ಒದಗಿಸದಿದ್ದರೆ ಅವರು ದಳ್ಳಾಳಿಗಳು ಏನು ಇದ್ದಾರೆ ಅವರ ಹತ್ತಿರ ಹೋಗುತ್ತಾರೆ. ಇದಕ್ಕೆ ತಾವು ಅವಕಾಶ ಮಾಡಿಕೊಡಬಾರದು. ರೈತರಿಗೆ ಸಹಾಯ ಮಾಡಲು ವಾಣಿಜ್ಯ ಬ್ಯಾಂಕ್‌ಗಳ ಹಾಗೂ ಸಹಕಾರ ಸಂಸ್ಥೆಗಳ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ವ್ಯವಸ್ಥೆ ಮಾಡಬೇಕು. ರೈತರು ಏನು ಸಾಲವನ್ನು ಪಡೆಯುತ್ತಾರೆ ಅದನ್ನು ಉತ್ಪಾದನೆಗೆಂದು ಬಳಸಿ ಆ ಸಾಲವನ್ನು ಮತ್ತೆ ವಾಪಸ್ ಕೊಡುವಂತಹ ವ್ಯವಸ್ಥೆ ಇರಬೇಕು. ಸಾಲವನ್ನು ವಾಪಸ್ ಕೊಡಬೇಕು ಎಂಬುದನ್ನು ನಾನೂ ಕೂಡ ಒಪ್ಪುತ್ತೇನೆ. ವಸೂಲಾತಿ ಕ್ರಮದ ಬಗ್ಗೆ ಒಂದು ಧೃಢವಾದ ನೀತಿಯನ್ನು ಅನುಸರಿಸದಿದ್ದರೆ, ನಿಷ್ಪ್ರಯೋಜಕವಾದ ನೀತಿಯನ್ನು ಅನುಸರಿಸದಿದ್ದರೆ ಈ ದೇಶದಲ್ಲಿರತಕ್ಕ ರೈತರು ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲ. ಇನ್ನೊಂದು ವಿಚಾರ ಎಂದರೆ ಈ ದೇಶದ ಕೃಷಿ ಉತ್ಪನ್ನ ಹೆಚ್ಚಿಗೆ ಆಗಬೇಕಾದರೆ ನಾವು ಇದನ್ನು ರಾಷ್ಟ್ರೀಯ ಮನೋಭಾವನೆಯಿಂದ ನೋಡಬೇಕೇ ಹೊರತು ಯಾವುದೇ ಪಕ್ಷ ರಾಜಕಾರಣದಿಂದ ನೋಡುವುದು ಬೇಡ. ಉತ್ತರಪ್ರದೇಶದಲ್ಲಿರತಕ್ಕ ಸರ್ಕಾರಗಳು ಏನು ಬೇಕಾದರೂ ಮಾಡಿಕೊಂಡಿರಲಿ, ಆದರೆ ದಕ್ಷಿಣ ಭಾರತದಲ್ಲಿರತಕ್ಕ ಸರ್ಕಾರಗಳು ಯಾವುದೇ ಯೋಜನೆಗಳನ್ನು ರೂಪಿಸಿಕೊಳ್ಳಲಿ ಅದನ್ನು ನಮ್ಮ ರಾಜ್ಯದ ಪರಿಸ್ಥಿತಿಗೆ ಅನುಗುಣವಾಗಿ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ತಾವು ಮುಂದಾಗಬೇಕು. ರೈತರಿಗೆ ಬಡ್ಡಿ ರಿಯಾಯಿತಿ ಮಾಡುವ ಆದೇಶ ಏನಿದೆ ಅದನ್ನು ಪೂರ್ಣಡಿಸಲು ಅದರ ಬಗ್ಗೆ ಚರ್ಚೆಮಾಡೋಣ. ಯಾವರೀತಿಯಿಂದ ರೈತರಿಗೆ ಉಪಯೋಗವಾಗುತ್ತದೆಂಬುದನ್ನು ಯೋಚನೆ ಮಾಡಿ ಮಾಡೋಣ.....

ಶ್ರೀ ವೀರೇಂದ್ರ ಪಾಟೀಲ್ —ಈಗ ನಾವು ಬಡ್ಡಿ ರಿಯಾಯಿತಿ ಕೊಡುತ್ತೇವೆಂದು ಏನು ಯೋಚನೆ ಮಾಡಿದ್ದೇವೆ, ಆರೀತಿ ರಿಯಾಯಿತಿಯನ್ನು ನೀವು ಕೊಡುವುದಕ್ಕಾಗುವುದಿಲ್ಲವೆಂದು ನಬಾರ್ಡ್‌ನವರು ತಕರಾರು ಮಾಡುತ್ತಿದ್ದಾರೆ. ಆದ್ದರಿಂದ ಈ ರಿಯಾಯಿತಿಯನ್ನು ಬೇರೆ ಇನ್ನಾವ ರೂಪದಲ್ಲಿ ರೈತರಿಗೆ ಕೊಡಬಹುದೆಂದು ನಾವು ಯೋಜನೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ.—ಆದರೆ ತಾವು ಬಜೆಟ್ ಭಾಷಣದಲ್ಲಿ ಹೇಳಿರುವುದು ಕೇವಲ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಎಂದು ನಾನು ತಿಳಿದಿದ್ದೇನೆ. ನಿಜವಾಗಿ ಈ ಯೋಜನೆಯ ಲಾಭ ಈ ದೇಶದ ಎಲ್ಲ ಕೃಷಿಕರಿಗೂ ಸಿಕ್ಕುವುದಾದರೆ ನಾನು ಖಂಡಿತವಾಗಿಯೂ ಇದನ್ನು ಸ್ವಾಗತಿಸುತ್ತೇನೆಂದು ಹೇಳಬಯಸುತ್ತೇನೆ. ರಿಯಾಯಿತಿ ಕೊಡುವ ಬಗ್ಗೆ ಹಿಂದೆ ಏನೊಂದು ಆದೇಶವಿತ್ತು ಆದೇಶವಿತ್ತು ಆದೇಶ

ಇರಬೇಕೆಂದು ನಾನು **ಹೇಳುವುದಿಲ್ಲ**. ನಬಾರ್ಡ್‌ನವರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. **ನಬಾರ್ಡ್‌ನವರು** ಯಾವತ್ತೂ ಇದೇರೀತಿ ಹೇಳುತ್ತಿರುತ್ತಾರೆ. ಇವತ್ತು ಹೊಸದಾಗಿ ಏನೂ ಅವರು **ಹೇಳುತ್ತಿಲ್ಲ**. ನಮ್ಮ ದೇಶವನ್ನು ನಬಾರ್ಡ್‌ನವರು ಆಳುತ್ತಿಲ್ಲ. **ಕೇಂದ್ರಸರ್ಕಾರ** ಮತ್ತು **ರಾಜ್ಯಸರ್ಕಾರ**ಗಳು ನಮ್ಮ ದೇಶದ ಜನರಿಂದ ಚುನಾಯಿತವಾಗಿ ಬಂದು ಆಡಳಿತ **ವನ್ನು** ನಡೆಸುತ್ತಿವೆ. ನಬಾರ್ಡ್‌ನವರಿಂದ ನಾವು ಆಳಿಸಲ್ಪಡುತ್ತಿಲ್ಲ. ನಬಾರ್ಡ್‌ನವರು ನಮ್ಮ ನೀತಿಯನ್ನು ಅನ್ನು ಸರಿಸದಿದ್ದರೆ ಅದನ್ನು ಬದಲಾಯಿಸುವ ಕೆಲವೊಂದು **ಅಧಿಕಾರಿ**ಗಳು ನಮ್ಮ ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರಕ್ಕೆದೆ ಆದ್ದರಿಂದ ನಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವುದರ ಮುಖಾಂತರ ಈ ನೀತಿಯನ್ನು ಬದಲಾಯಿಸಲು ಪ್ರಯತ್ನ ಮಾಡೋಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಮುಂಚಿತವಾಗಿ ರೈತರಿಗೆ ಸಣ್ಣ **ಪುಟ್ಟ** ರಿಯಾಯಿತಿಗಳನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ನಮ್ಮ ರೈತರು ಬ್ಯಾಂಕುಗಳಿಂದ ಮತ್ತು ಸಹಕಾರ ಸಂಘಗಳಿಂದ ೫೦-೬೦ ಸಾವಿರ ರೂಪಾಯಿಗಳ ಸಾಲವನ್ನು ತರಬೇಕಾದರೆ ತನ್ನ ಆಸ್ತಿಯನ್ನು ಆಧಾರಮಾಡಬೇಕಾಗುತ್ತದೆ. ಆಧಾರ ಪತ್ರವನ್ನು ಬರೆದು ಕೊಡಬೇಕಾದರೆ ಬಹಳಷ್ಟು ಹಣ ಖರ್ಚಾಗುತ್ತದೆ. ಇದು ಅವರಿಗೆ ಒಂದು ದೊಡ್ಡ ಹೊರೆಯಾಗುತ್ತದೆ. ಈ ಹೊರೆಯನ್ನು ತಪ್ಪಿಸಬೇಕಾದುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಆಗಿದೆ. ಕೆಲವು ಸಂದರ್ಭಗಳಲ್ಲಿ ೧೦ ಸಾವಿರದವರೆಗೆ ಅಥವಾ ೧೫ ಸಾವಿರದವರೆಗೆ ರಿಯಾಯಿತಿಯನ್ನು ನಾವು ರೈತರಿಗೆ ಕೊಟ್ಟಿರತಕ್ಕ ಹಲ ವಾರು ಪ್ರಕರಣಗಳಿವೆ. ಆದ್ದರಿಂದ ಇವತ್ತು ಈ ಪರಿಸ್ಥಿತಿಯನ್ನು ಪರಿಶೀಲಿಸಿ ಅವಶ್ಯಕತೆ ಇರತಕ್ಕ ರೈತರು ಇರಿಗೇಷನ್ ಲೋನ್ ತೆಗೆದುಕೊಳ್ಳಬೇಕಾದರೆ, ಬೋರ್‌ವೆಲ್ ಕೊರೆಸಿ ಪಂಪ್‌ಸೆಟ್ಟು ಹಾಕ ಬೇಕಾದರೆ ಕನಿಷ್ಟ ಎಂದರೂ ಸುಮಾರು ೫೦-೪೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಯಾರು ಈ ರೀತಿ ಬ್ಯಾಂಕುಗಳಿಂದ ಅಥವಾ ಸಹಕಾರ ಸಂಘಗಳಿಂದ ಸಾಲವನ್ನು ಪಡೆಯುತ್ತಾರೆ ಅಂಥವರಿಗೆ ಈ ಹೊರೆಯನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಆದರೆ ಸಾಲ ಮನ್ನಾ ವಿಚಾರದಲ್ಲಿ **ನಮ್ಮದೇ** ಆದ ಒಂದು ನೀತಿಯನ್ನು ನಾನು ಈಗಾಗಲೇ ಪೇಳಿದ್ದೇನೆ. ಕೇಂದ್ರ ಸರ್ಕಾರದವರು ಕೃಷಿ ಮತ್ತು ಗ್ರಾಮೀಣ ಸಾಲಗಳ ಪರಿಹಾರ ಯೋಜನೆಯನ್ನು ರೂಪಿಸಿದ್ದಾರೆ. ತಾವು ಹೇಳಿರತಕ್ಕ ಎಲ್ಲ ವಿಚಾರಗಳನ್ನೂ ಈ ಅರ್ಥ ವಿವರಣೆಯಲ್ಲಿ ಹೇಳಿದ್ದಾರೆ. ಈ ಎಲ್ಲ ಅರ್ಥ ವಿವರಣೆಗಳಿಗೆ ಬೆಳಪಟ್ಟು ನಮ್ಮ ದೇಶದ ರೈತರಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವಾದರೆ ಅದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಪೂರಕವಾಗಿ ಯೋಜನೆ ಇರಬೇಕು. ಅದರಲ್ಲಿ ಸ್ವಾಮ್ಪ್‌ದರವನ್ನು ಕಡಿಮೆ ಮಾಡಬೇಕಾದ ಸಂದರ್ಭ ಇರಬಹುದು. ವಿದ್ಯುತ್ ಪೂರೈಕೆಯಲ್ಲಿ ಅದ್ಯತೆಯನ್ನು ಕೊಡತಕ್ಕ ವಿಚಾರ ಇರಬಹುದು, ಅಥವಾ ಬೇರೆ ಇನ್ಯಾವುದೇ ವಿಚಾರ ಇರಬಹುದು. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಉದಾಹರಣೆಗೆ ಹೇಳುವುದಾದರೆ ಕಳೆದ ೨ ವರ್ಷಗಳಿಂದ ಈ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಂದ ಸಾಲವನ್ನು ಪಡೆದಿರತಕ್ಕ ರೈತ ಯಾರಿದ್ದಾನೆ ಅವನಿಗೆ ಸಕಾಲದಲ್ಲಿ

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷಪೀಠವನ್ನು ಅಲಂಕರಿಸಿದರು)

ವಿದ್ಯುತ್ ಪೂರೈಕೆ ಆಗದಿರುವುದರಿಂದ ಅವನು ಬಹಳಷ್ಟು ಕಷ್ಟವನ್ನು ಅನುಭವಿಸಬೇಕಾದಸಂದರ್ಭಗಳಿವೆ ಆದ್ದರಿಂದ ಇಂಥ ರೈತರಿಗೆ ಯಾವರೀತಿಯಲ್ಲಿ ಹೆಚ್ಚಿಗೆ ಹಣವನ್ನು ಕೊಡುಬಹುದೆಂಬುದನ್ನು ತಾವು ಆಲೋಚನೆ ಮಾಡಬೇಕು. ಇಂಥ ಯಾವುದೇ ಆಲೋಚನೆಗಳಿಗೂ ನಾವು ಯಾವುದೇ ರಾಜಕೀಯವನ್ನೂ ಬೆರಸದೆ ತವಗೆ ಸಂಪೂರ್ಣಬೆಂಬಲವನ್ನು ಕೊಡುತ್ತೇವೆಂದು ಹೇಳಿ ಈ ಪರಿಹಾರ ಯೋಜನೆಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು ಮತ್ತು ಉಳಿದ ವಿಚಾರಗಳಲ್ಲಿ ನಾನು ಈಗಾಗಲೇ ಹೇಳಿದಂತೆ ಒಂದು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡುತ್ತೀರೆಂದು ನಂಬಿ ನಾನು ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಂಗಿಸುತ್ತೇನೆ.

†ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಉಪಾಧ್ಯಕ್ಷಿಣಿಯವರೇ ಸನ್ಮಾನ್ಯ ಮುಖ್ಯಮಂತ್ರಿಗಳು ಕೆಲವು ಪ್ರಶ್ನೆಗಳನ್ನು ಹಾಕಿದ್ದಾರೆ. ಇದು ತುಂಬ ಸೂಕ್ತವಾದುದಾಗಿದೆ. ಮುಂದೆ ರೈತರ ಸಾಲ ಮನ್ನಾ ಮಾಡುವ ದೃಷ್ಟಿಯಿಂದ ಆ ದಿಕ್ಕಿನಲ್ಲಿ ಯೋಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಕೆಲವು ನೇರವಾದ ಪ್ರಶ್ನೆಗಳನ್ನು ಹಾಕಿದ್ದಾರೆ. ಅವರು ಕೇಳಿರುವಂಥ ಸಲಹೆ ಅಥವಾ ಸ್ಪಷ್ಟೀಕರಣ ಸಾಲ ಅಂದರೆ ಯಾವತರದ ಸಾಲ ಮನ್ನಾ ಮಾಡಬೇಕು ಎಂದು ? ನನ್ನ ದೃಷ್ಟಿಯಿಂದ ನಾವು ಈಗ ಚರ್ಚೆ ಮಾಡುತ್ತಿರತಕ್ಕಂಥದ್ದು ಸಹಕಾರಿ ಸಂಘಗಳ ಮೂಲಕ, ಪಿ. ಎಲ್. ಡಿ. ಬ್ಯಾಂಕ್‌ಗಳ ಮೂಲಕ ಈ ರೀತಿ ಏನು ಬ್ಯಾಂಕ್‌ಗಳು ಇವೆ.

ಅವಕ್ಕೆ ನಮ್ಮ ರಾಜ್ಯ ಸರ್ಕಾರದ ಮೂಲಕ ಸಾಲ ಕೊಡುತ್ತಿರುತ್ತಾರೆ. ಆದ್ದರಿಂದ ನಾನು ಅದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಮತ್ತು ಅಲ್ಪಾವಧಿಸಾಲ ಮತ್ತು ಮಧ್ಯಮಾವಧಿ ಸಾಲ ಮಾತ್ರ ಮನ್ನಾ ಆಗಬೇಕೆನ್ನುವುದು ನನ್ನ ಭಾವನೆ. ಇದರಲ್ಲಿ ಸಣ್ಣ ರೈತರು ದೊಡ್ಡ ರೈತರು ಎನ್ನುವ ಭೇದ ಭಾವನೆ ಇಲ್ಲದೆ ಅಲ್ಪಾವಧಿ ಸಾಲವನ್ನು ಪಡೆದಿರಲಿ ಅಥವಾ ಮಧ್ಯಮಾವಧಿ ಸಾಲ ಪಡೆದಿರುವಂಥವರಿಗೆ ಸಾಲ ಮನ್ನಾ ಮಾಡಲು ಈಗಾಗಲೇ ಬ್ಯಾಂಕ್ ಕಟ್ ಆಫ್ ಡೇಟ್ ೨-೧೦-೯೯ ಎಂದು ಕೇಂದ್ರ ಸರ್ಕಾರ ಹೇಳಿದೆ. ಅಲ್ಲಿಯವರೆಗೆ ಸುಸ್ತಿ ಬಾಕಿ ಯಾರು ಯಾರಿದ್ದಾರೆ, ೧೫ ಸಾವಿರದಿಂದ ೨೦ ಸಾವಿರದವರೆಗೆ ಸಾಲ ಪಡೆದಿರುವವರಿಗೆ ಮೊದಲ ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಬೇಕೆನ್ನುವುದು ನನ್ನ ಸಲಹೆ ಮತ್ತು ಅಭಿಪ್ರಾಯವಾಗಿದೆ.

ಎರಡನೆಯದಾಗಿ ಈ ರೀತಿ ಸಾಲ ಮನ್ನಾ ಮಾಡಿದರೆ ನಾವು ಯಾವರೀತಿ ಹಣ ತುಂಬಿ ಕೊಡಬೇಕು ಎನ್ನುವ ಮಾತನ್ನು ಕೇಳಿದ್ದಾರೆ. ಅದಕ್ಕೆ ಅವರು ಒಂದು ಅಂಕಿಅಂಶವನ್ನು ಸಂಗ್ರಹ ಮಾಡಿಕೊಟ್ಟರೆ ಅನುಕೂಲವಾಗಬಹುದು. ೧೦ ಸಾವಿರದ ಒಳಗಡೆ ಇರತಕ್ಕಂಥ ಎಲ್ಲ ರೈತರ ಅಲ್ಪಾವಧಿ ಮಧ್ಯಮಾವಧಿ ಸಾಲ ಮನ್ನಾ ಮಾಡಿದರೆ, ೨.೧೦.೯೯ರ ಕಟ್ ಆಫ್ ಡೇಟ್ ಇಟ್ಟುಕೊಂಡು ಆ ಸಾಲಗಾರರಾಗಿರುವಂಥ ಎಲ್ಲ ರೈತರ ಸಾಲವನ್ನು ಮನ್ನಾ ಮಾಡುವುದಾದರೆ ನಮಗೆ ಎಷ್ಟು ದುಡ್ಡು ಬೇಕಾಗುತ್ತದೆ ಎಂಬುದರ ಬಗ್ಗೆ ಅಂಕಿಅಂಶಗಳನ್ನು ತಿಳಿಸಿದರೆ ಒಳ್ಳೆಯದು ಮತ್ತು ಎರಡನೆಯದಾಗಿ ೧೦ ಸಾವಿರಕ್ಕೂ ಮೇಲೆ ೧೫ ಸಾವಿರ ಇರಬಹುದು ೨೦ ಸಾವಿರ ಇರಬಹುದು ಈ ರೀತಿ ೨೦ ರಿಂದ ೩೦ ಸಾವಿರದವರೆಗೆ ಸಾಲ ತೆಗೆದುಕೊಂಡಿದ್ದರೂ ಸಹ ಅವರಿಗೆ ಮೊದಲ ಹತ್ತು ಸಾವಿರ ರೂಪಾಯಿಗಳಿಗೆ ಇರೆಸ್ಪೆಕ್ಟೀವ್ ಆಗಿ ಸಣ್ಣ ರೈತರು, ದೊಡ್ಡ ರೈತರು ಎನ್ನುವ ಭೇದಭಾವನೆ ಇಲ್ಲದೆ ಸಾಲ ಮನ್ನಾ ಮಾಡಿದರೆ ಆವಾಗ ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಖರ್ಚು ಬರುತ್ತದೆಂಬ ಅಂಕಿಅಂಶಗಳನ್ನು ತಾವು ಹೇಳಿದರೆ ಬಹುಶಃ ನಮ್ಮ ರಾಜ್ಯವು ಸಾಲ ಮನ್ನಾ ಮಾಡುವುದು ಎಷ್ಟು ?ನಮ್ಮ ಮೇಲೆ ಎಷ್ಟು ಸಾಲದ ಭಾರ ಬೀಳುತ್ತದೆಂಬುದು ಗೊತ್ತಾಗುತ್ತದೆ. ಇದರಲ್ಲಿ ಅರ್ಧಭಾಗ ಕೇಂದ್ರ ಸರ್ಕಾರದವರು ಕೊಡುವುದರಿಂದ ಉಳಿದ ಅರ್ಧಭಾಗವನ್ನು ರಾಜ್ಯ ಸರ್ಕಾರ ತುಂಬುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಯೋಚನೆ ಮಾಡುವುದಕ್ಕೆ ಅನುಕೂಲ ವಾಗುತ್ತದೆ. ಮತ್ತು ಈ ಸಾಲವನ್ನು ಯಾವರೀತಿ ತುಂಬಬೇಕು, ಎಲ್ಲಿಂದ ತರಬೇಕು ಎನ್ನುವ ಬಗ್ಗೆ ತಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿದರೆ ಅಲ್ಪಿಮೇಟಾಗಿ ಕಡು ಬಡವ ಯಾರು ಇದ್ದಾರೆ, ಹರಿಜನ ಗಿರಿಜನರು ಯಾರು ಇದ್ದಾರೆ ಅವರು ದುಶ್ಚಟಕ್ಕೆ ಬಲಿಯಾಗಿ ಅವರ ಮೇಲೆ ತೆರಿಗೆ ಭಾರ ಬಿದ್ದರೂ ಸಹ ಈಗ ಸೋರಿ ಹೋಗತಕ್ಕಂಥ ಎಕ್ಸೈಸ್ ಬಾಬತ್ತಿನಿಂದ ಹಣ ಸಂಗ್ರಹ ಮಾಡಿ ಈ ಖರ್ಚನ್ನು ತುಂಬಿ ಹೊಂದಿಸುವ ಪ್ರಯತ್ನ ಏನಾದರೂ ಮಾಡಿದ್ದೀರಾ ? ಮತ್ತು ಅಬಕಾರಿ ಇಲಾಖೆಯಲ್ಲಿ ಸೋರಿ ಹೋಗುವುದನ್ನು ತಪ್ಪಿಸಿದ್ದೀರಾ ? ಕೇವಲ ಇದರಲ್ಲಿಯೇ ೧೦೦ ಕೋಟಿ ರೂಪಾಯಿಗಳನ್ನು ಇದಕ್ಕೆ ತೆಗೆದಿಡಲು ಸಾಧ್ಯವಿದೆ. ಅದು ಆಗದಿದ್ದರೆ ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದಲ್ಲಿ ಇದಕ್ಕಾಗಿ ಸಾಲ ತೆಗೆದುಕೊಳ್ಳಬೇಕಾದ ಪ್ರಯತ್ನ ಮಾಡಬೇಕಾಗುತ್ತದೆ. ಅದೂ ಆಗುವುದಿಲ್ಲವೆಂದರೆ ನೀವು ಪ್ರಯತ್ನ ಮಾಡಿ ಕೇಂದ್ರ ಸರ್ಕಾರದಿಂದ ಬಡ್ಡಿರಹಿತ ಸಾಲ ತೆಗೆದುಕೊಂಡು ನಾವು ಇನ್‌ಸ್ಟಾಲ್‌ಮೆಂಟ್ ಬೇಸಿಸ್‌ಮೇಲೆ ವಾಪಸ್ ಕೊಡುತ್ತೇವೆಂದು ಅವರಿಗೆ ಹೇಳಬೇಕು. ಈ ರೀತಿ ನಾವು ರಾಜ್ಯದ ಎಲ್ಲ ರೈತರ ಹತ್ತು ಸಾವಿರದ ಒಳಗೆ ಇರುವಂತಹ ಸಾಲ ಮನ್ನಾ ಮಾಡುವ ಪ್ರಯತ್ನ ಮಾಡಿದರೆ ಪಾತ್ರ ರೈತರ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ತಮಗೆ ತಿಳಿಸಲು ಇಚ್ಛೆಪಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ನಾನು ಕೇಳಿದ್ದೇನೆಂದರೆ, ಈ ಸಾಲದ್ದು ಕಟ್ ಆಫ್ ಡೇಟ್ ಏನು ಇರಬೇಕು, ಪ ತ್ತು ಇವತ್ತು ಕಟ್ ಆಫ್ ಡೇಟ್‌ನಲ್ಲಿ ಅವರು ಸಾಲಗಾರನಾಗಿರಬೇಕು ಅಥವಾ ಡಿಫಾಲ್ಟರ್ ಆಗಿರಬೇಕು. ಇದು ವೇದಲು ಕ್ಲಿಯರ್ ಆಗಬೇಕು. ಅಂದರೆ ಔಟ್‌ಸ್ಟಾಂಡಿಂಗ್ ಇರಬೇಕು ಅಥವಾ ಓವರ್ ಡ್ಯೂ ಇರಬೇಕು. ಓವರ್ ಡ್ಯೂ ಇರತಕ್ಕಂಥ ಸಾಲ ಮನ್ನಾ ಮಾಡಬೇಕೇ ಅಥವಾ ಇವತ್ತಿನ ದಿನ ಅವನಿಗೆ ಎಷ್ಟು ಸಾಲ ಇದೆ, ಡ್ಯೂ ಇರಲಿ ಓವರ್‌ಡ್ಯೂಸ್ ಇರಲಿ, ಎಲ್ಲವನ್ನೂ ಮನ್ನಾ ಮಾಡಬೇಕೆ ಎನ್ನುವುದರ ಬಗ್ಗೆ ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಉಪಾಧ್ಯಕ್ಷರೆಯವರೇ, ಮಾನ್ಯ ಸಭಾನಾಯಕರಿಗೆ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತಿರುವುದೇನೆಂದರೆ ಈಗಾಗಲೇ ಕೇಂದ್ರ ಸರ್ಕಾರ ಬ್ಯಾಂಕ್‌ನಿಂದ ಸಾಲ ಪಡೆದಿರತಕ್ಕಂಥವರಿಗೆ ೨-೧೦-೯೯ನ್ನು ಕಟ್ ಆಫ್ ಡೇಟ್ ಮಾಡಿದೆ. ಆದರೆ ಸಹಕಾರ ಸಂಘಗಳ ಮೂಲಕ ಪಡೆದ ಸಾಲ ಮನ್ನಾ ಮಾಡುವ ಸಂದರ್ಭದಲ್ಲಿ ಆ ದಿನದಲ್ಲಿ ಸುಸ್ತಿದಾರರಾಗಿದ್ದರೇ ಎಂಬ ಪ್ರಶ್ನೆ ಬರುವುದಿಲ್ಲ. ೨-೧೦-೯೯ಕ್ಕೆ ಬಾಕಿದಾರರಾಗಿದ್ದರೆ ಅವರು ಸಣ್ಣ ರೈತರು ಇರಲಿ ದೊಡ್ಡ ರೈತರು ಇರಲಿ ೧೫

ಸಾವಿರ ರೂಪಾಯಿಗಳನ್ನು ಸಾಲ ಪಡೆದಿರಲಿ ೨೦ ಸಾವಿರ ರೂಪಾಯಿಗಳನ್ನು ಸಾಲ ಪಡೆದಿರಲಿ ಮೊದಲು ೧೦ ಸಾವಿರವನ್ನು ಸಣ್ಣ ರೈತ ದೊಡ್ಡ ರೈತ ಎನ್ನುವ ಭೇದಭಾವ ಮಾಡದೆ ೨೧.೧೦.೮೯ನೇ ಕಟ್ ಆಫ್ ಡೇಟ್ ಇಟ್ಟುಕೊಂಡು ಅವರ ಸಾಲ ಮನ್ನಾ ಮಾಡಬೇಕು. ಇದು ನನ್ನ ಸಲಹೆ. ಎರಡನೆಯದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಹಕಾರಿ ಸುಸ್ತಿ ಸಾಲಗಾರರಿಗೂ ಬಾಕಿದಾರರಿಗೂ ವ್ಯತ್ಯಾಸ ನೋಡದೆ. ಸಾಲಗಾರರಾಗಿದ್ದರೆ ಸಾಕು, ಅಂತಹವರ ಸಾಲ ಮನ್ನಾ ಮಾಡಬೇಕು. ಈ ಬಗ್ಗೆ ತಮಗೆ ಗೊತ್ತಿರುವ ಹಾಗೆ ಕಳೆದ ೪-೫ ತಿಂಗಳಿಂದ ಸತತವಾಗಿ ನಾವು ಹೋರಾಟ ಮಾಡುತ್ತಿದ್ದೇವೆ. ಮಾರ್ಚ್ ಒಂದನೇ ತಾರೀಖಿನಿಂದ ಆ ತಿಂಗಳ ಕೊನೆಯವರೆಗೆ ರಾಜ್ಯದ ಉದ್ದಗಲಕ್ಕೆ ಅಲೆದು ಸರ್ಕಾರಕ್ಕೆ ರೈತರ ಅಭಿಪ್ರಾಯ ತಿಳಿಸುವ ಪ್ರಯತ್ನ ಮಾಡಿದ್ದೇವೆ. ತಾವು ಪ್ರಶ್ನೆ ಕೇಳಿದ ಹಿನ್ನೆಲೆಯಲ್ಲಿ, ರೈತರ ಹಿತದ ಹಿನ್ನೆಲೆಯಲ್ಲಿ ಯೋಚನೆ ಮಾಡುವಂಥ ಕಾಲ ಇಡೀ ದೇಶದಲ್ಲಿ ಮೂಡಿ ಬಂದಿದೆ ಎಂದು ಭಾವಿಸುತ್ತೇನೆ. ತಮ್ಮ ಸರ್ಕಾರದ ಮನಸ್ಸಿನಲ್ಲಿ ಸಹ ಇವತ್ತು ರೈತ ಪಡೆದಂತಹ ಸಾಲವನ್ನು ಮನ್ನಾ ಮಾಡುವ ಅಗತ್ಯ ಇದೆ ಎಂದು ತಮಗೆ ಅನ್ನಿಸುತ್ತಿದೆಯೇ ? ಸಾಲ ಮನ್ನಾ ಮಾಡುವ ಅಗತ್ಯ ಇದ್ದರೆ ಸರ್ಕಾರ ಇದುವರೆಗೆ ಈ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮ ವೇನು ? ಈ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳೊಳಗೆ ಸಾಲ ಇರುವಂತಹ ಎಲ್ಲಾ ರೈತರ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಈಗಲೇ ಕಳುಹಿಸಿಕೊಡಿ ಎಂದು ಆಗ್ರಹಿಸಿದಾಗ ಕಳುಹಿಸಿಕೊಡುತ್ತೇವೆಂದು ತಾವು ಹೇಳಿದ್ದಿರಿ. ಆ ರೀತಿ ರಾಜ್ಯದ ಸಹಕಾರ ಸಂಘಗಳಿಂದ ಅಂಕಿಅಂಶಗಳನ್ನು ತೆಗೆದುಕೊಂಡು ಕೇಂದ್ರಕ್ಕೆ ಪ್ರೊಪೋಸಲ್ ಕಳುಹಿಸಿ ಕೊಡುವುದಕ್ಕೆ ತಮಗೆ ಸಾಧ್ಯವಾಗಿದೆಯೆ ? ವಿರೋಧ ಪಕ್ಷದವರ ನಿಯೋಗ ತೆಗೆದುಕೊಂಡು ಹೋಗುತ್ತೇವೆ, ಇದರ ಬಗ್ಗೆ ಚರ್ಚೆ ಮಾಡುತ್ತೇವೆಂದು ಹೇಳಿದಿರಿ. ಆದನ್ನಾದರೂ ಮಾಡಿದಿರಾ ? ಹಣಕಾಸಿನ ಪರಿಸ್ಥಿತಿ ಸರಿಯಿಲ್ಲದೇ ಇರುವುದರಿಂದ ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡುವ ಪರಿಸ್ಥಿತಿ ಇಲ್ಲವೆಂದು ಹೇಳಿದ್ದೀರಿ. ಆವತ್ತಿಗೂ ಇವತ್ತಿಗೂ ಇರುವ ವ್ಯತ್ಯಾಸವೇನು ? ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿಗಳು ತಮ್ಮ ಜೊತೆಯಲ್ಲಿದ್ದಾಗ ಈ ಬಗ್ಗೆ ತಾವುಗಳು ಪ್ರಧಾನ ಮಂತ್ರಿಗಳೊಡನೆ ಮಾತನಾಡುವ ಸಂದರ್ಭದಲ್ಲಿ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡುವುದಾದರೆ ಶೇಕಡ ೫೦ ರಷ್ಟನ್ನು ನಾವು ಕೊಡಲು ಸಿದ್ಧರಿದ್ದೇವೆಂದು ಕೇಂದ್ರದವರು ಹೇಳಿರುವುದು ಇದೆ. ಆ ಬಗ್ಗೆ ನಿಮಗೆ ಕೇಂದ್ರ ಸರ್ಕಾರದಿಂದ ತಿಳಿವಳಿಕೆ ಬಂದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಏನಾದರೂ ಬಂದಿದೆಯೆ ? ಬಂದಿದ್ದರೆ ಅದನ್ನು ಸದನದ ಗಮನಕ್ಕೆ ತರುತ್ತೀರೆಂದು ಭಾವಿಸುತ್ತೇನೆ. ಈಗ ರಾಜ್ಯದ ಪರಿಸ್ಥಿತಿ ಏನು ? ಈಗ ನಾವು ಜೂನ್ ಮೊದಲ ವಾರದಲ್ಲಿದ್ದೇವೆ. ಮುಳಿಗಾಲ ಪ್ರಾರಂಭವಾಗಿದೆ. ನೂರಕ್ಕೆ ೩೦-೩೫ ಭಾಗ ಬಿತ್ತನೆ ಆಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಾಯಕರುಗಳು ಮಾತನಾಡಿದ ಮೇಲೆ ಹತ್ತು ಸಾವಿರ ರೂಪಾಯಿ ಸಾಲ ಮನ್ನಾ ಆಗಿದೆ, ನಾವು ಋಣಮುಕ್ತರಾಗಿದ್ದೇವೆ ಹೊಸ ಸಾಲ ಸಿಗುತ್ತದೆ, ಕೃಷಿ ಸಾಲ ಸಿಗುತ್ತದೆಂಬ ವಿಶ್ವಾಸದಿಂದ ಇವತ್ತು ರಾಜ್ಯದ ರೈತರು ಇದ್ದಾರೆ, ಇಂಥ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಆಗುತ್ತದೆ ಅಥವಾ ಇಲ್ಲ ಎಂಬ ಪ್ರಶ್ನೆ ಇಲ್ಲ. ಇಡೀ ದೇಶದ ವಾತಾವರಣ ಹೇಗಿದೆ ಎಂದರೆ, ಕೇಂದ್ರದಲ್ಲಿರುವ ಉನ್ನತ ನಾಯಕರು ಮಾತನಾಡಿದ ಮಾತು, ಅನೇಕ ರಾಜ್ಯದ ಮುಖ್ಯಮಂತ್ರಿಗಳು ಹೇಳಿರುವ ಮಾತು ಹಾಗು ಹಿರಿಯ ಸದಸ್ಯರು ಮಾತನಾಡಿದ ಮಾತಿನಿಂದ ೧೦ ಸಾವಿರ ರೂಪಾಯಿ ಸಾಲ ಮನ್ನಾ ಆಗುತ್ತದೆಂಬ ಭಾವನೆ ಎಲ್ಲರಲ್ಲಿ ಮೂಡಿದೆ. ಬರೀ ಸಾಲ ಮನ್ನಾ ಆದರೆ ಸಾಲದು, ಮರು ಸಾಲ ಸಿಕ್ಕಿ ಕೃಷಿ ಕಾರ್ಯವನ್ನು ಪ್ರಾರಂಭಿಸ ಬೇಕಾಗಿದೆ ರೈತ. ಈ ದಿಸೆಯಲ್ಲಿ ತಮ್ಮ ಮನಸ್ಸನ್ನು ಗೆಲ್ಲಲು ಪ್ರಯತ್ನ ಮಾಡುತ್ತಿದ್ದೇವೆ. ರಾಜ್ಯದ ರೈತರ ಸಾಲವನ್ನು ಮನ್ನಾ ಮಾಡುವುದು ಕೂಡ ಒಂದು ರೀತಿಯಲ್ಲಿ ಅಭಿವೃದ್ಧಿ ಕಾರ್ಯ ಮಾಡಿದಂತೆ ಹಾಗೆ. ಇದುವರೆಗೆ ೭೫ ಪರ್ಸೆಂಟ್ ಜನ ರೈತರು ಸಾಲ ಕಟ್ಟುವ ಸ್ಥಿತಿಯಲ್ಲಿರುವುದಿಲ್ಲ. ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ಹೇಗೋ ಸಾಲ ಕಟ್ಟುತ್ತಿದ್ದಾರೆಯೇ ಹೊರತು ಸಾಲ ಸಿಕ್ಕಿ ಹೊಸದಾಗಿ ಬೀಜ, ಗೊಬ್ಬರ ಕೊಂಡುಕೊಂಡು ಒಳ್ಳೆಯ ಬೆಳೆ ಬೆಳೆಯುವ ವಾತಾವರಣ ಮೂಡಿಲ್ಲ. ೬-೭ ವರ್ಷಗಳಿಂದ ರೈತರು ಬಂಗಾರಕ್ಕೆ ಸಿಕ್ಕಿ ಒಳ್ಳೆಯ ಬೆಳೆ ಬೆಳೆದರೂ ಬೆಲೆ ಸಿಕ್ಕದೆ ಸಾಲಗಾರರಾಗಿರುವ ಈ ಸಂದರ್ಭದಲ್ಲಿ ಅವರನ್ನು ಋಣಮುಕ್ತರನ್ನಾಗಿ ಮಾಡಿ ಅವರೂ ಸಹ ಗೌರವ ಜೀವನ ಮಾಡುವುದಕ್ಕೆ ಅವರ ಆರ್ಥಿಕ ವ್ಯವಸ್ಥೆ ಸರಿಪಡಿಸಬೇಕೆಂದು ಹೇಳುತ್ತೇನೆ. ಈಗಾಗಲೇ ಹಿರಿಯ ಪೂಜಿ ಸಹಕಾರ ಸಚಿವರು ಮಾತನಾಡಿದರು. ಇವತ್ತು ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ರೈತರ ಸಾಲ ಮನ್ನಾ ಮಾಡುವುದರಿಂದ ದೊಡ್ಡ ಕ್ರಾಂತಿ ಆಗುತ್ತದೆ, ಆತನಿಗೆ ತನ್ನ ಕಾಲ ಮೇಲೆ ತಾನು ನಿಲ್ಲುವ ಶಕ್ತಿ ಬರುತ್ತದೆಂದು ನಾನು ಹೇಳುತ್ತಿಲ್ಲ. ಕೇಂದ್ರ ಸರ್ಕಾರ ಮಾಡಿದ ಅನ್ಯಾಯಕ್ಕೆ ಅವನು

ಪ್ರಾಯಶ್ಚಿತ್ತವನ್ನು ಅನುಭವಿಸುತ್ತಿದ್ದಾನೆ. ನಿಜಕ್ಕೂ ಇದು ಒಳ್ಳೆಯ ಪದ್ಧತಿ ಅಲ್ಲ. ಇದರಿಂದ ರೈತಾಪಿ ಜನರಿಗೆ ಅನ್ಯಾಯವಾಗುತ್ತಿದೆ. ರೈತರ ಸಾಲ ಮನ್ನಾ....

ಶ್ರೀ ಜಿ. ರಾಜುಗೌಡ.—ಈಗ ರಾಜ್ಯದಲ್ಲಿರತಕ್ಕ ಒಬ್ಬ ರೈತ ಸಹಕಾರಿ ಸಂಘಗಳಲ್ಲಾಗಲೀ ಅಥವಾ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕಿನಲ್ಲಾಗಲೀ ೧೦ ಸಾವಿರ ರೂಪಾಯಿ ಸಾಲ ಮಾಡಿರುತ್ತಾನೆ. ಆ ೧೦ ಸಾವಿರ ರೂಪಾಯಿ ಸಾಲಕ್ಕೆ ೨೦ ಸಾವಿರ ರೂಪಾಯಿ ಬಡ್ಡಿಯಾಗಿರುತ್ತದೆ. ಅಂದರೆ ಒಟ್ಟು ಸಾಲ ೩೦ ಸಾವಿರ ರೂಪಾಯಿ ಆಯಿತು. ತಾವು ಹೇಳಿದಂತೆ ಮೊದಲ ೧೦ ಸಾವಿರ ರೂಪಾಯಿ ಕಟ್ ಆಫ್ ಮಾಡಿದರೆ, ಉಳಿದಿರತಕ್ಕ ೨೦ ಸಾವಿರ ರೂಪಾಯಿ ಬಡ್ಡಿಯನ್ನು ಅಸಲಾಗಿ ಪರಿವರ್ತನೆ ಮಾಡಿದರೆ ಮತ್ತೆ ಅದಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ದಯವಿಟ್ಟು ಅದರ ಬಗ್ಗೆ ಸಹ ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಮಾತನಾಡಬೇಕಾದರೆ ಮೊದಲೇ ಹೇಳಿದ್ದೇನೆ; ಈ ಬಗ್ಗೆ ಕೇಂದ್ರ ಸರ್ಕಾರ ಈಗಾಗಲೇ ಸ್ಪಷ್ಟವಾಗಿ ತಿಳಿಸಿದೆ. ಅವನು ಮಾಡಿರುವ ಸಾಲದ ಅಸಲನ್ನು ಮನ್ನಾ ಮಾಡಿದರೆ ಬಡ್ಡಿ ಆಟೊಮ್ಯಾಟಿಕ್ ಆಗಿ ಮನ್ನಾ ಆಗುತ್ತದೆ. ನಾನು ಬಡ್ಡಿಯ ಬಗ್ಗೆ ಮಾತನಾಡುತ್ತಿಲ್ಲ. ಅವನ ಅಸಲಿನ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.— ತಾವು ಹೇಳುವುದರಲ್ಲಿ ಬಹುಶಃ ಬಹಳಷ್ಟು ತಮಗೆ ಕನ್‌ಫ್ಯೂಸನ್ ಇದೆಯೆಂದು ನನಗೆ ಅರ್ಥವಾಗಂತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲದಿದ್ದರೆ ಸರಿ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಏಕಾಂತಯ್ಯನವರು ಸ್ಪಷ್ಟವಾಗಿ ಹೇಳಿದರು. ಅವರು ಏನು ಹೇಳಿದರು ಅಂದರೆ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ. ಸಾಲ ಮನ್ನಾ ಮಾಡುವ ಬಗ್ಗೆ ಆ ಯೋಜನೆಯ ಪ್ರಕಾರ ಶೇಕಡ ೫೦ರಷ್ಟು ರೈತರ ಸಾಲದ ಹೊರೆಯನ್ನು ಅವರು ಹೊತ್ತುಕೊಳ್ಳುವುದಕ್ಕೆ ತಯಾರಾಗಿದ್ದಾರೆ. ಈ ಯೋಜನೆಯನ್ನು ರಾಜ್ಯಸರ್ಕಾರದವರು ಸಂಪೂರ್ಣವಾಗಿ ಒಪ್ಪಿಕೊಂಡು ಅದರ ಲಾಭವನ್ನು ಪಡೆದುಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನಾನು ತಮಗೆ ಕೇಳುವಂತಹದ್ದು, ಕೇಂದ್ರಸರ್ಕಾರದ ಯೋಜನೆಯನ್ನು ನಾವು ಒಪ್ಪಿಕೊಳ್ಳಬೇಕೆಂದು ಹೇಳುವುದು ತಮ್ಮ ವಾದ ಆಗಿದೆಯೋ ಅಥವಾ ಕೇಂದ್ರ ಸರ್ಕಾರ ಮಾಡಿರುವ ಯೋಜನೆ ನಮಗೆ ಸಂಬಂಧವಿಲ್ಲವೋ ಅಥವಾ ನಿಮಗೆ ಅವರ ಯೋಜನೆಯಲ್ಲಿ ಏನಾದರೂ ವ್ಯತ್ಯಾಸವಿದೆಯೇ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪತ್ರಿಕೆಗಳಲ್ಲಿ ಬಂದಿರುವಂತೆ ಕೇಂದ್ರಸರ್ಕಾರದವರು ಹೇಳಿರುವ ಮಾತಿನಂತೆ ನೀವು ಒಪ್ಪಿಕೊಳ್ಳುವುದಾದರೆ ಅವರು ಹೇಳಿರುವುದು ದಿನಾಂಕ ೩೧-೧೦-೮೯ಕ್ಕೆ ಯಾರೂ ಡಿಫಾಲ್ಟರ್ಸ್ ಇದ್ದಾರೆ ಅಂತಹವರ ಸಾಲ ಮನ್ನಾ ಮಾಡಬೇಕೆಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವು ಓದಿದ್ದೇವೆ. ಈ ಬಗ್ಗೆ ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿರುವ ಅಂಕಿ ಅಂಶಗಳು, ಅಲ್ಲಿಂದ ನಿಮಗೆ ಬಂದಿರುವ ಸುತ್ತೋಲೆಗಳಿಂದ ಅದನ್ನು ನಮಗೆ ತಾವು ಕ್ಲಿಯರ್ ಮಾಡಬೇಕು. ೩೧-೧೦-೮೯ಕ್ಕೆ ಯಾರು ಡಿಫಾಲ್ಟರ್ಸ್ ಆಗಿರುತ್ತಾರೆ ಅಂತಹವರ ಸಾಲ ಮನ್ನಾ ಮಾಡಬೇಕೆನ್ನುವುದು, ಡಿಫಾಲ್ಟರ್ಸ್ ಎನ್ನುವ ಶಬ್ದ ಉಪಯೋಗ ಮಾಡಿದರೆ ನಮ್ಮ ದೇಶವಲ್ಲ, ಇಡೀ ಪ್ರಪಂಚದ ಯಾವ ರೈತರ ಸಾಲವೂ ಮನ್ನಾ ಆಗುವುದಿಲ್ಲ. ಆದ್ದರಿಂದ ಶೇಕಡಾ ಇಬ್ಬರಿಗೂ ಲಾಭವಾಗುವುದಿಲ್ಲ. ನಾನು ಅರ್ಥಮಾಡಿಕೊಂಡಿರುವಂತೆ ಪತ್ರಿಕೆಗಳಲ್ಲಿ ಬಂದಿರುವುದು ಸರಿಯಲ್ಲ. ಯಾರು ಸಾಲಗಾರರಾಗಿರುತ್ತಾರೆ, ೧೦ ಸಾವಿರ ರೂಪಾಯಿ ಯಾರು ಸಾಲ ತೆಗೆದುಕೊಂಡಿರುತ್ತಾರೆ ಅಂತಹವರ ಸಾಲ ಮನ್ನಾ ಆಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಎರಡನೆಯದಾಗಿ ಕೇಂದ್ರ ಸರ್ಕಾರದ ಮನಸ್ಸಿನಲ್ಲಿ ೧೦ ಸಾವಿರ ರೂಪಾಯಿಗಳ ಮೇಲೆ ಸಾಲ ತೆಗೆದುಕೊಂಡಿರುವವರು ಅಂದರೆ ೧೨ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿರುವವರಿಗೆ ೧೦ ಸಾವಿರ ರೂಪಾಯಿವರೆಗೆ ಸಾಲ ಮನ್ನಾ ಆಗುವುದಿಲ್ಲವೆಂದರೆ, ಅದೇನಾದರೂ ಅವರ ಅಭಿಪ್ರಾಯವಾಗಿದ್ದರೆ ಇದೂ ಸಹ ರೈತರ ಜೊತೆ ಕೇಂದ್ರಸರ್ಕಾರದ ಚೆಲ್ಲಾಟವಾಗುತ್ತದೆ. ರೈತನಿಗೆ ದ್ರೋಹ ಮಾಡಿದಂತಾಗುತ್ತದೆ. ತಮ್ಮಲ್ಲಿ ಏನಂತಿ ಮಾಡಿಕೊಳ್ಳುವುದೇನೆಂದರೆ, ಈ ಬಗ್ಗೆ ಕೇಂದ್ರ ಸರ್ಕಾರದ ಮನಸ್ಸನ್ನು ತಾವು ಒಲಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಕಣ್ಣು ರೈತ ದೊಡ್ಡ ರೈತ ಇವರೆಲ್ಲರಿಗೂ ಅನ್ಯಾಯವಾಗುತ್ತದೆ. ಯಾವ ರೈತರೇ ಇರಬಹುದು. ನಮಗೆ ಸುತ್ತೋಲೆ ಮೇಲೆ ರೈತನನ್ನು ಖೆಣಕಲಾಂಡಿಯನ್ನಾಗಿ ಮಾಡಿ ಅವನ ಅವನ ಕಾಲ ಮೇಲೆ ನಿಲ್ಲುವ ಹಾಗೆ ಪ್ರಯತ್ನ ಮಾಡುವಂತಹ ಕಾಲದಲ್ಲಿ ಇಂತಹ ಸಂದರ್ಭದಲ್ಲಿ ಕೇಂದ್ರ

ಸರ್ಕಾರ ತಗೆದುಕೊಂಡಿರುವ ನಿಲುವು ೨-೧೦-೮೯ಕ್ಕೆ ಡಿಫಾಲ್ಟರ್ ಎನ್ನುವ ಶಬ್ದವನ್ನು ಉಪಯೋಗಿಸಿದ್ದರೆ ಆ ಬಗ್ಗೆ ಸರ್ಕಾರಿ ಆಜ್ಞೆಯಾಗಿದ್ದರೆ ಅದನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಕೇಂದ್ರಸರ್ಕಾರ ರೈತರ ಜೊತೆ ಚೆಲ್ಲಾಟವಾಡುತ್ತಿದೆಯೆಂದು ತಿಳಿದು ನಾವು ಹೋರಾಟ ಮಾಡಬೇಕಾಗುತ್ತದೆ. ಅದಕ್ಕೆ ನಾವು ನೀವು ಸೇರಿ ಹೋರಾಟ ಮಾಡಬೇಕಾಗುತ್ತದೆ. ಎರಡನೆಯದಾಗಿ ೧೫ ಸಾವಿರ ೨೦ಸಾವಿರ ಸಾಲ ಪಡೆದಿದ್ದರೆ, ಯಾವ ಸಾಲ ಅಂದರೆ. ಅಲ್ಪಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲವನ್ನು ಯಾರು ಪಡೆದಿದ್ದಾರೆ, ಅದರಲ್ಲಿ ಮೊದಲ ೧೦ ಸಾವಿರ ರೂಪಾಯಿ ಅಸಲನ್ನು ಮತ್ತು ಅದರ ಬಡ್ಡಿಯನ್ನು ಪೂರ್ಣ ಮನ್ನಾ ಮಾಡಬೇಕಾಗುತ್ತದೆ. ನಾನು ದೀರ್ಘಾವಧಿ ಸಾಲಕ್ಕೆ ಹೋಗುತ್ತಿಲ್ಲ. ಇದಕ್ಕೆ ಸಂಬಂಧಪಟ್ಟ ಅಂಕಿಅಂಶಗಳು ತಮ್ಮಲ್ಲಿವ್ವರೆ ಅದನ್ನು ತೀಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ಸಾಲ ಮನ್ನಾ ಆಗಬೇಕೆಂದು ಎಷ್ಟಕ್ಕೆ ಕೇಳುತ್ತಿದ್ದೇವೆಂದರೆ...

ಶ್ರೀ ವೀರೇಂದ್ರ ಪಾಟೀಲ್. —ನಾನು ತಮಗೆ ಇದನ್ನು ಏತಕ್ಕೆ ಕೇಳಿದೆ ಅಂದರೆ, ಕೇಂದ್ರದವರು ಕೆಲವು ಯೋಜನೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಹೇಳಿದಂತೆ ಯೋಜನೆ ಮಾಡಿದರೆ ಶೇಕಡಾ ೫೦ರಷ್ಟು ಹಣ ಕೊಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿದ್ದಾರೆ. ಇಲ್ಲದಿದ್ದರೆ ಅವರು ಕೊಡುವುದಿಲ್ಲವೆಂದು ತಾವು ತಿಳಿದುಕೊಳ್ಳಿ. ಏಕೆಂದರೆ ಚಳುವಳಿ ಮಾಡುವ ಮುನ್ನ ನೀವು ಅವರು ಎಲ್ಲರೂ ಸೇರಿ ಚಳುವಳಿ ಮಾಡುತ್ತಿದ್ದಿರಿ, ಆದರೆ ಭಾಷಣ ಮಾಡುವಾಗ ಅವರ ದಾಟಿ ಒಂದು ಇದೆ. ನಿಮ್ಮ ದಾಟಿ ಬೇರೆ ಇದೆ. ಸಾಲ ಮನ್ನಾ ಆಗುವ ವಿಚಾರದಲ್ಲಿ ಚಳುವಳಿ ನಡೆಯುವಾಗ ಎಲ್ಲರೂ ಜೊತೆ ಆಗುತ್ತೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ —ನಾನು ಅವರ ಜೊತೆಗೆ ಯಾವತ್ತೂ ಸೇರಿಲ್ಲ. ನಾನು ಅಂದರೆ ನಮ್ಮ ಪಾರ್ಟಿಯವರು ದೂರ ಇದ್ದೇವೆ. ನಾವು ಬೇರೆಯೇ ಇದ್ದೇವೆ.

ಶ್ರೀ ವೀರೇಂದ್ರ ಪಾಟೀಲ್. —ನಾನು ಕೇಳುವುದು ಕೇಂದ್ರಸರ್ಕಾರದವರು ಏನೊಂದು ಯೋಜನೆಯನ್ನು ಮಾಡಿದ್ದಾರೆ. ಅದು ಕರ್ನಾಟಕಕ್ಕೆ ಒಂದು ಯೋಜನೆ ಆಂಧ್ರಪ್ರದೇಶಕ್ಕೆ ಒಂದು ಯೋಜನೆ, ಮಧ್ಯಪ್ರದೇಶಕ್ಕೆ ಒಂದು ಯೋಜನೆ, ಹಿಮಾಚಲ ಪ್ರದೇಶಕ್ಕೆ ಒಂದು ಯೋಜನೆ ಎಂದು ಆಗುವುದಿಲ್ಲ. ಅವರು ಯೂನಿಫಾರಂ ಸ್ಕೀಮ್‌ನಲ್ಲಿ ಸಾಲ ಮನ್ನಾ ಮಾಡಿದ್ದಾರೆ. ಆ ಪ್ರಕಾರ ಆಪ್ಷೊಂದು ಫ್ರೇಮ್‌ನಲ್ಲಿ ನಿಮ್ಮ ಯೋಜನೆ ತಯಾರು ಮಾಡಿ ಕಳುಹಿಸಿಕೊಡಿಯೆಂದು ನಮಗೆ ಹೇಳಿದ್ದಾರೆ. ಅವರು ಹೇಳಿದ ಪ್ರಕಾರ ನಾವು ಯೋಜನೆ ತಯಾರು ಮಾಡಿ ಕಳುಹಿಸಿದರೆ ಮಾತ್ರ ಯಾರು ಸಾಲ ಪಡೆದಿದ್ದಾರೆ, ಅಂತಹವರು ಶೇಕಡ ೫೦ರಷ್ಟು ಹಣ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇಲ್ಲ ಇಲ್ಲ ಪ್ರಶ್ನೆ ಏನೆಂದರೆ ತಾವು ಹೇಳುವಂತಹ ಯೋಜನೆ ಹಾಗೂ ಪರತ್ನುಗಳಿಗೆ ತಮ್ಮ ಒಪ್ಪಿಗೆ ಇಲ್ಲವೆಂದು ಅವರು ಹೇಳುತ್ತಾರೆ.

೫-೪೫ ಪಿ. ಎಂ.

ಅವರ ಒಪ್ಪಿಗೆಯಂತೆ ನಾವು ಯೋಜನೆ ಮಾಡಿ ಕಳುಹಿಸಿದರೆ ಮಾತ್ರ ನಮಗೆ ೫೦ ಪರ್ಸೆಂಟ್ ಕೊಡುತ್ತಾರೆ. ಇಲ್ಲದಿದ್ದರೆ ಆ ೫೦ ಪರ್ಸೆಂಟ್ ಅನ್ನು ಸಹ ಅವರು ಕೊಡುವಂತೆ ಇಲ್ಲ. ತಾವು ಹೇಳಿದಂತೆ ಮಾಡಿದರೆ ಅವರು ನಮಗೆ ಹೇಳುತ್ತಾರೆ ನಾವು ಹೇಳಿದಂತೆ ನೀವು ಯೋಜನೆ ತಯಾರು ಮಾಡಿಲ್ಲ ಆದಕ್ಕೆ ನಾವು ಯಾವ ತರಹದ ಸಹಾಯ ಮಾಡುವುದಕ್ಕೆ ತಯಾರು ಇಲ್ಲ ಎಂದು ಹೇಳುವಂತಹ ಸಮಯದಲ್ಲಿ ನಾವು ಏನು ಮಾಡಬೇಕು? ಅದನ್ನು ತಾವು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಅತ್ಯಂತ ವಿನಯದಿಂದ ರೈತರ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮಗೆ ಗೊತ್ತಿದ್ದಂತೆ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅವರ ಶಬ್ದಗಳಲ್ಲಿ ಹೇಳಿರುವಂತೆ ೨-೧೦-೮೯ಕ್ಕೆ ಹಿಂದೆ ಯಾವ ರೈತ ಸಾಲ ಪಡೆದುಕೊಂಡಿರುತ್ತಾನೋ ಅಂತಹ ರೈತನ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ತಾವು ಏನಾದರೂ ಇದನ್ನು ಒಪ್ಪಿಕೊಂಡರೆ ಅಥವಾ ತಮ್ಮ ಮನಸ್ಸಿಗೆ ಇದು ಸಮಾಧಾನವಾದರೆ, ಅವರ ಮನಸ್ಸಿನಲ್ಲಿರುವಂತೆ ತಾವು ಮಾಡಿದರೆ ಕರ್ನಾಟಕ ರಾಜ್ಯದಲ್ಲಿ ಶೇಕಡ ೨-೩ ಪರ್ಸೆಂಟ್ ರೈತರಿಗೂ ಇದರಿಂದ ಲಾಭ ಆಗುವುದಿಲ್ಲ. ಬಹುಶಃ ತಾವು ಹೇಳಿದ ರೀತಿಯಲ್ಲಿ ಕೇಂದ್ರ ಸರ್ಕಾರ ಮಾಡುವುದಿಲ್ಲವೆಂದು ನಾನು ತೀರ್ಮಾನಿಸಿಕೊಂಡಿದ್ದೇನೆ. ನನಗೆ ತಿಳಿದ ಹಾಗೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಕೇಂದ್ರ ಸರ್ಕಾರದ ಸಹಾಯ ಡಿಫಾಲ್ಟರ್ಸ್ ಅಲ್ಲದೆ ಇರುವಂತಹ ಮತ್ತು ಸಾಲಗಾರರಾದರೂ ಸಾಕು, ಅಂತಹವರಿಗೆ ಈ ಸಹಾಯ ಕೊಡುತ್ತೇವೆಂದು ಅವರು ಹೇಳಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಮತ್ತೊಂದು ವಿಷಯವೇನೆಂದರೆ,

ನಾನು ಇಲ್ಲಿ ಧರಣಿ ಮಾಡಿದಾಗ ಮತ್ತು ಹೊರಗಡೆ ಸತ್ಯಾಗ್ರಹ ಮಾಡಿದಾಗ ತಾವು ನನಗೆ ಒಂದು ಮಾತು ಹೇಳಿದಿರಿ, ಏನೆಂದರೆ ಮಾನ್ಯ ಯಡಿಯೂರಪ್ಪನವರೇ ತಮ್ಮ ಪಕ್ಷ ೩-೪ ರಾಜ್ಯಗಳಲ್ಲಿ ಸರ್ಕಾರ ನಡೆಸುತ್ತಿದೆ. ತಾವು ಜವಾಬ್ದಾರಿಯಿಂದ ಮಾತನಾಡಿ ಎಂದು ಹೇಳಿದಿರಿ ಹಾಗೂ ತಾವು ಇಲ್ಲಿ ಧರಣಿ ಸತ್ಯಾಗ್ರಹ ಮಾಡುವ ಬದಲು ಮಾನ್ಯ ಎಲ್.ಕೆ. ಅಡ್ವಾಣಿ ಅವರ ಮನೆ ಮುಂದೆ ಮತ್ತು ಅಟಲ್ ಬಿಹಾರಿ ವಾಜಪೇಯಿ ಅವರ ಮನೆ ಮುಂದೆ ಧರಣಿ ಸತ್ಯಾಗ್ರಹ ಮಾಡಿ ಎಂದು ನನಗೆ ಹೇಳಿದಿರಿ. ತಾವು ನನಗೆ ಏನಾದರೂ ಸಲಹೆ ಸೂಚನೆ ಕೊಡಿ ಎಂದು ಕೇಳಿದಾಗ ನಾನು ಉತ್ತರವನ್ನು ಜವಾಬ್ದಾರಿಯಿಂದ ಕೊಡಬೇಕೆನ್ನುವ ದೃಷ್ಟಿಯಿಂದ ನಾನು ಈಗಾಗಲೇ ಭೂಪಾಲ ನಲ್ಲಿರುವ ನಮ್ಮ ಕೆಲವು ನಾಯಕರೊಡನೆ ಮಾತನಾಡಿದ್ದೇನೆ. ನಮ್ಮ ಪಕ್ಷ ಮಧ್ಯ ಪ್ರದೇಶದಲ್ಲಿ ಸರ್ಕಾರ ನಡೆಸುತ್ತಿದೆ ಮಧ್ಯ ಪ್ರದೇಶದ ಸರ್ಕಾರ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡಿದೆ. ಅದೇನೆಂದರೆ ಕೇಂದ್ರ ಸರ್ಕಾರದ ಯೋಜನೆ ಪ್ರಕಾರ ನಾವು ಯೋಜನೆಯನ್ನು ತಯಾರು ಮಾಡಿದರೆ ಅದರಿಂದ ಯಾವುದೇ ಒಬ್ಬ ರೈತನಿಗೆ ಅನುಕೂಲವಾಗುವುದಿಲ್ಲ ಎಂದು ನಾವು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ಸಹ ಯೋಚನೆ ಮಾಡಿದ್ದೇವೆಂದು ಹೇಳಿದರು. ಮಧ್ಯಪ್ರದೇಶದಲ್ಲಿ ಒಟ್ಟು ೮೩ ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರದ ನಾರಮ್ಸ್ ಪ್ರಕಾರ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ ಅದರಂತೆ ಹಣ ಕೊಡಬೇಕೆಂದು ಸಹ ಕೇಳಿದ್ದಾರೆ. ಮತ್ತು ೧೦ ಸಾವಿರ ರೂಪಾಯಿಗಳು ಮತ್ತು ಅದಕ್ಕಿಂತ ಜಾಸ್ತಿ ಸಾಲ ಇರುವಂತಹ ಬಡ ರೈತನ ಸಾಲ ಮನ್ನಾ ಮಾಡುವ ಪ್ರಶ್ನೆ ಬಂದಾಗ ೧೬೬ ಕೋಟಿ ರೂಪಾಯಿಗಳನ್ನು ಮಧ್ಯ ಪ್ರದೇಶ ಸರ್ಕಾರ ಬರಿಸಬೇಕಾಗುತ್ತದೆ. ಮಧ್ಯ ಪ್ರದೇಶ ಸರ್ಕಾರ ಕೇಂದ್ರ ಸರ್ಕಾರದ ಯೋಜನೆಗೆ ಅನುಗುಣವಾಗಿ ಈಗಾಗಲೇ ೮೩ ಕೋಟಿ ರೂಪಾಯಿಗಳ ಯೋಜನೆ ತಯಾರು ಮಾಡಿ ಕಳುಹಿಸಿಕೊಟ್ಟಿದ್ದಾರೆ ಅದರ ಜೊತೆಗೆ ಅಲ್ಲಿನ ಎಂ.ಪಿ.ಗಳೆಲ್ಲಾ ಈ ಬಗ್ಗೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಾಯ ಮಾಡುವವರಿದ್ದಾರೆ. ಅವರಿಗೆ ಏನಾದರೂ ಆ ಸಹಾಯ ಕೇಂದ್ರ ಸರ್ಕಾರದಿಂದ ದೊರೆತರೆ ನಾವು ಸಹ ಹೋರಾಟ ಮಾಡೋಣ, ಚಳುವಳಿ ಮಾಡೋಣ ೧೦ ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡುವುದಕ್ಕೆ ತಾವು ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಏನು ಒಪ್ಪಿಕೊಂಡಿದ್ದೀರಿ. ಆ ಪ್ರಕಾರ ರೈತರ ಸಾಲ ಮನ್ನಾ ಮಾಡಿ ತಾವು ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದಂತೆ ನಡೆದುಕೊಳ್ಳಿ ಎಂದು ಕೇಳೋಣ ಮಧ್ಯಪ್ರದೇಶದಲ್ಲಿ ಅವರು ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿದಂತೆ ಇವತ್ತು ನೂರಕ್ಕೆ ತ್ರೊಂಭತ್ತೊಂಭತ್ತರಷ್ಟು ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಿಂದ ಸುಮಾರು ೯೦ ಕೋಟಿ ರೂಪಾಯಿಗಳಷ್ಟು ಸಹಾಯ ಅಲ್ಲಿನ ರೈತರಿಗೆ ಆಗುತ್ತದೆ. ೧೦ ಸಾವಿರ ರೂಪಾಯಿಗಳವರೆಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಪಡೆದ ರೈತರ ಪರವಾಗಿ ಬಂದು ತೀರ್ಮಾನ ತೆಗೆದು ಕೊಳ್ಳಲು ಮಧ್ಯ ಪ್ರದೇಶ ಸರ್ಕಾರ ಕ್ಯಾಬಿನೇಟ್ ಮೀಟಿಂಗ್ ಸೇರಿದೆ. ಅವರು ಏನಾದರೂ ಒಂದು ತೀರ್ಮಾನ ಮಾಡಿಯೇ ಮಾಡುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ. ಅದೇ ರೀತಿ ಗುಜರಾತ್, ಬಿಹಾರ ಮತ್ತು ರಾಜಸ್ಥಾನ್‌ಗಳವರು ಸಹ ದೊಡ್ಡ ಮನಸ್ಸು ಮಾಡಿ ಈ ಸಾಲ ಮನ್ನಾ ಮಾಡಬಹುದು. ಆದಕ್ಕೆ ತಾವು ಸಹ ಇಲ್ಲಿ ದೊಡ್ಡ ಮನಸ್ಸು ಮಾಡಿ ಇದರಲ್ಲಿ ಯಾವುದೇ ರಾಜಕೀಯ ಬೆರೆಸದೆ ರೈತರ ಹಿತ ದೃಷ್ಟಿಯಿಂದ ಈ ಕೆಲಸ ಮಾಡಿ ಆಗ ನಿಮ್ಮ ಸರ್ಕಾರಕ್ಕೆ ಕೀರ್ತಿ ಬರುತ್ತದೆ ಎನ್ನುವ ಆಸೆ ನನ್ನದು ನಿಮ್ಮ ಸರ್ಕಾರ ಖಂಡಿತ ಪೂರ್ತಿ ಇರಬೇಕು. ಪ್ರಾಮಾಣಿಕವಾಗಿ ಒಳ್ಳೆಯ ಕೆಲಸ ಮಾಡಿ ಎಂದು ಹೇಳುವವನು ನಾನು. ವೈಯಕ್ತಿಕವಾಗಿ ನನಗೆ ಯಾರ ಮೇಲೂ ದ್ವೇಷ ಇಲ್ಲ. ತಾವು ರೈತರ ಬಗ್ಗೆ ಕಳಕಳಿ ಇಟ್ಟುಕೊಳ್ಳಬೇಕು. ನನಗೆ ಸರ್ಕಾರದ ಬಗ್ಗೆ ಆಗಲಿ ತಮ್ಮ ಬಗ್ಗೆ ಆಗಲಿ ಕಳಕಳಿ ಇದೆ. ಈ ದೇಶದಲ್ಲಿ ತಮಗೆ ಗೊತ್ತಿರುವ ಹಾಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಯಾರು ಸಾಲ ಪಡೆಯುತ್ತಾರೆ ಎಂದರೆ ಶಕ್ತಿ ಇರುವವರು, ಶ್ರೀಮಂತರು ಸಾಲ ಪಡೆಯುತ್ತಾರೆ; ಅಂತಹವರ ಸಾಲ ಮನ್ನಾ ಮಾಡುವಂತಹ ಸಂದರ್ಭದಲ್ಲಿ, ಯಾರು ಕಡುಬಡವ ಎರಡು ಮೂರು ಎಕರೆ ಜಮೀನು ಇಟ್ಟುಕೊಂಡಿರುವ ಬಡವ ಸಾಲ ಪಡೆದರೆ ಅವರ ಸಾಲ ಮಾತ್ರ...

SRI D. B. CHANDRE GOWDA.—In Gandhinagar, Gujarath Government has already announced waiving of loans totalling to Rs. 435 crores. Kindly get the details.

ಶ್ರೀ ವೀರೇಂದ್ರಪಾಟೀಲ್.—ಈ ವಿಚಾರದಲ್ಲಿ ನಮಗೂ ಮಾನ್ಯ ಏಕಾಂತಯ್ಯನವರಿಗೂ ಏನಾದರೂ ಭಿನ್ನಾಭಿಪ್ರಾಯ ಇದೆಯೋ ಹೇಗೆ ? ಅವರ ಜೊತೆಯಲ್ಲಿ ನೀವು ಪೂರ್ತಿಯಾಗಿ ಒಪ್ಪುತ್ತೀದಿವ ಇದ್ದೀರೋ ಅಥವಾ ಅವರಿಗೂ ನಿಮಗೂ ಏನಾದರೂ ವ್ಯತ್ಯಾಸ ಇದೆಯೋ ಏಕೆಂದರೆ ಮಾನ್ಯ ಏಕಾಂತಯ್ಯನವರು ಏನು ಹೇಳಿದ್ದಾರೆಂದರೆ ತಾವು ಕೇಂದ್ರ ಸರ್ಕಾರದ ಯೋಜನೆಗೆ

ಅನುಗುಣವಾಗಿ ಯೋಜನೆ ತಯಾರು ಮಾಡಿ ಕಳುಹಿಸಿ ಅವರಿಂದ ಏನು ಸಹಾಯ ಬರುತ್ತದೆಯೋ ಅದನ್ನು ತೆಗೆದುಕೊಂಡು ರೈತರಿಗೆ ಕೊಡಿ ಎಂದು ಹೇಳುತ್ತಾರೆ. ಅದಕ್ಕೆ ತಾವು ಈಗ ಹೇಳುತ್ತಿರುವುದೇ ನೆಂದರೆ ೧೦ ಸಾವಿರ ರೂಪಾಯಿಗಳು ಆಗಲಿ ಅಥವಾ ೫೦ ಸಾವಿರ ರೂಪಾಯಿಗಳೇ ಆಗಲಿ ಅದು ಎಷ್ಟೇ ಸಾಲ ಆಗಲಿ, ೨–೧೦-೮೯ಕ್ಕೆ ಅವರು ಸಾಲಗಾರರಾಗಿದ್ದರೆ ಸಾಕು ಅವರು ಡಿಫಾಲ್ಟರ್ ಅಲ್ಲದೆ ಇದ್ದರೂ ಹೋಗಲಿ ಅಂತಹವರೆಲ್ಲರ ಸಾಲ ಪೂರ್ತಿಯಾಗಿ ಮನ್ನಾ ಮಾಡಬೇಕೆಂದು ಹೇಳುತ್ತಿದ್ದೀರೋ ಹೇಗೊ?

ಮಾನ್ಯ ವಿಕಾಂತಯ್ಯನವರು ೫೦ ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರೆ. ಅದರಲ್ಲಿ ೧೦ ಸಾವಿರ ರೂಪಾಯಿ ಸಾಲ ಮನ್ನಾ ಆಗಬೇಕೆಂದೂ ಉಳಿದ ೪೦ ಸಾವಿರ ರೂಪಾಯಿಗಳನ್ನ ಲೆಕ್ಕಕ್ಕೆ ತೆಗೆದುಕೊಳ್ಳಿ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ತಾವು ಸ್ಪಷ್ಟವಾಗಿ ಏನು ಹೇಳುತ್ತಿದ್ದೀರಿ, ಅದಕ್ಕೂ ಕೇಂದ್ರ ಸರ್ಕಾರದ ಯೋಜನೆಗೂ ಫಿಟ್ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ತಾವು ಹೇಳುವುದು ಬೇರೆ, ಕೇಂದ್ರಸರ್ಕಾರದ ಯೋಜನೆ ಬೇರೆ. ಅದಕ್ಕಾಗಿ ಕೇಂದ್ರಸರ್ಕಾರದ ಯೋಜನೆಯನ್ನು ಒಪ್ಪುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ನಾವು ಜನರಿಗೆ ಏನು ಭರವಸೆಯನ್ನು ಕೊಟ್ಟಿದ್ದೇವೆ ಆ ಪ್ರಕಾರ ನಾವು ಹೋಗುತ್ತೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆದ್ದರಿಂದ ಈಗ ತಾವು ಹೇಳಿ, ಕೇಂದ್ರಸರ್ಕಾರದ ಯೋಜನೆಯನ್ನು ತಾವು ಒಪ್ಪಿಕೊಳ್ಳುತ್ತೇವೆಂದು ಹೇಳುತ್ತಿರೋ ಅಥವಾ ಇಲ್ಲವೆಂದಂ ಹೇಳುತ್ತಿರೋ, ಅದನ್ನು ತಾವು ಸ್ಪಷ್ಟವಾಗಿ ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರಿಗೂ ನಮಗೂ ಭಿನ್ನಾಭಿಪ್ರಾಯ ತರುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಿ ? ಇಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಿಲ್ಲ. ಅವರ ಅಭಿಪ್ರಾಯ ಅವರು ಹೇಳುತ್ತಾರೆ. ಮಾನ್ಯ ಯಡಿಯೂರಪ್ಪನವರೆ ಜೊತೆಗೆ ನಮ್ಮನ್ನು ಸೇರಿಸಬೇಡಿ. ಈ ಸರ್ಕಾರ ಬರುವುದಕ್ಕೆ ಪಂಚಾಂತೆ ಧರಣಿ ಮಾಡಿದ್ದರು. ಶಾಸನಸಭೆ ಸೇರಿದ ದಿವಸ ಧರಣಿ ಮಾಡಿದರು. ನಾವು ಆ ಕೆಲಸ ಮಾಡಲಿಲ್ಲ. ಆದ್ದರಿಂದ ಅವರು ನಮ್ಮನ್ನು ಕರೆದಿಲ್ಲ, ನಾವು ಅವರನ್ನು ಕರೆದಿಲ್ಲ ಅಂತ ಅಲ್ಲ, ಆ ಮಾತು ಬೇರೆ. ಆದರೆ ಇವತ್ತು ಅವರು ಏನು ಹೇಳುತ್ತಿದ್ದಾರೆ ? ಅವರ ಯೋಜನೆ ಯಾವುದು ಎಂದು ನನಗೆ ಗೊತ್ತಿಲ್ಲ. ಮುಖ್ಯವಾಗಿ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದೆ, ಅದನ್ನು ಕೇಂದ್ರಸರ್ಕಾರ ಹಮ್ಮಿಕೊಂಡು ಕೆಲಸ ಮಾಡುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಮಾನ್ಯ ಉಪಾಧ್ಯಕ್ಷಣೀಯವರೆ, ಬಂದು ಮಾತನ್ನು ಸಭಾನಾಯಕರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ಭಾಗದಲ್ಲಿರುವವರಾಗಲಿ ಮತ್ತು, ಆ ಭಾಗದಲ್ಲಿರುವವರಾಗಲಿ. ರೈತರ ಪ್ರಶ್ನೆ ಬಂದಾಗ ಯಾರೂ ವಿರೋಧ ಮಾಡುವುದಕ್ಕೆ ಬರುವುದಿಲ್ಲ. ರೈತರ ಪರವಾಗಿ ಮಾತನಾಡಬೇಕೆನ್ನುವವರು ಎರೆಡೂ ಕಡೆ ಇದ್ದಾರೆ. ಮಾನ್ಯ ಚಂದ್ರೇಗೌಡರು ಹೇಳಿದ ಮಾತು ನಿಜ. ರೈತರ ಪರವಾಗಿ ಮಣ್ಣಿನ ಮಕ್ಕಳಾಗಿ ಎಲ್ಲರೂ ಇದ್ದೇವೆ. ನನಗೆ ಈ ಬಗ್ಗೆ ಹೋರಾಟ ಮಾಡಬೇಕೆನಿಸಿತು, ಆ ಕಳಕಳಿ ಇತ್ತು, ನಾನು ಹೋರಾಟ ಮಾಡಿದ್ದೇನೆ. ಅವರೂ ಸಹ ಮಾಡಿದ್ದಾರೆ. ಅವರವರನೇ ಆದ ರೀತಿಯಲ್ಲಿ ಎಲ್ಲರೂ ಸಹ ರೈತರ ಪರವಾಗಿ ಹೋರಾಟ ಮಾಡಿದ್ದಾರೆ. ನಾನು ಒಬ್ಬನೇ ಅಲ್ಲಿ ಹೋರಾಟ ಮಾಡಿರುವವನು. ನಾನು ಒಬ್ಬ ಸಾಮಾನ್ಯ ವ್ಯಕ್ತಿ, ನಾನು ನನ್ನ ಕೆಲಸ ಮಾಡಿದ್ದೇನೆ. ದೊಡ್ಡವರು ಮುಂದೆ ಹೋದರೆ ಅವರ ಹಿಂದೆ ಹೋಗುವುದಕ್ಕೆ ನಾನು ತಯಾರಾಗಿದ್ದೇನೆ. ಭಾರತೀಯ ಜನತಾ ಪಕ್ಷದವರಾದ ನಾವು ನಮ್ಮದೇ ಆದ ರೀತಿಯಲ್ಲಿ ಹೋರಾಟ ಮಾಡಿದ್ದೇವೆ. ಧರಣಿ ಮಾಡಿದ್ದೇವೆ. ಇದರಿಂದ ನಿಮ್ಮ ಮನಸ್ಸಿಗೆ ನೋವಾಗಿರಬಹುದು, ಆದರೆ ನಾವು ನಮ್ಮ ಕರ್ತವ್ಯ ಮಾಡಿದ್ದೇವೆ. ಇದು ಆದಮೇಲೆ ಮಾನ್ಯ ಚಂದ್ರೇಗೌಡರು ತಮ್ಮ ಕಾರ್ಯಕ್ರಮವನ್ನು ರೂಢಿಸಿಕೊಂಡರು. ಜನತಾ ದಳದವರು ಕಾರ್ಯಕ್ರಮ ಹಾಕಿಕೊಂಡು ಈ ಕೆಲಸ ಮಾಡಿದ್ದರೆ ನಮ್ಮ ಅಭ್ಯಂತರವಿರುತ್ತಿರಲಿಲ್ಲ. ಬೇರೆ ಪಕ್ಷಗಳ ಜೊತೆಗೆ ಸೇರಿಕೊಂಡು ಮಾಡಿದ್ದರೂ ತಪ್ಪಲ್ಲ. ತಮ್ಮ ಕಾರ್ಯಕ್ರಮಕ್ಕೆ ಭಾರತೀಯ ಜನತಾ ಪಕ್ಷದವರು ಸೇರಬೇಕೆಂಬ ಅಪೇಕ್ಷೆ ಇದ್ದರೆ, ಅದಕ್ಕೆ ನೀವು ಆಹ್ವಾನ ಕೊಟ್ಟಾಸಹ ನಾನು ಬರದಿದ್ದರೆ ಯಡಿಯೂರಪ್ಪನವರು ಬರಲಿಲ್ಲವೆಂದು ಹೇಳ ಬಹುದಾಗಿತ್ತು. ಇದು ಜನತಾದಳದ ಕಾರ್ಯಕ್ರಮವೆಂದು ನಾನು ವಿರೋಧ ಮಾಡುತ್ತಿರಲಿಲ್ಲ. ಇದೆಲ್ಲಾ ಸದನದಲ್ಲಿ ಚರ್ಚೆ ಮಾಡುವ ವಿಷಯವಲ್ಲ. ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳುತ್ತೇನೆ ರೈತರ ಪರವಾಗಿ ಕೇಂದ್ರ ಸರ್ಕಾರ ಇದೆಯೇ ಎಂದು ಕೇಂದ್ರ ಸರ್ಕಾರ ರಾಜ್ಯದ ರೈತರಿಗೆ ದ್ರೋಹ ಮಾಡುವ ಪ್ರಯತ್ನ ಮಾಡುತ್ತಿದೆ. ನೇಕಾರರ ಸಾಲ ಮನ್ನಾ ಮಾಡುತ್ತೇವೆ ವಿೀನುಗಾರರ ಸಾಲ ಮನ್ನಾ ಮಾಡುತ್ತೇವೆ ಚಿನ್ನದ ಮೇಲಿನ ಸಾಲ ಮನ್ನಾ ಮಾಡುತ್ತೇವೆಂದು ಕೂಗಿ ಚೀರಿ ಮಳೆ ಬಿದ್ದು ರೈತರು ಬಿತ್ತನೆ ಕೆಲಸ ಪ್ರಾರಂಭ ಮಾಡುವಾಗ ಯಾವುದೇ ಸರಿಯಾದ ಸರ್ಕ್ಯುಲರ್ ಆಲ್ಲಿಂದ ಬಂದಿಲ್ಲ. ರೈತ ತ್ರಿಶಂಕು ಸ್ಥಿತಿಯಲ್ಲಿದ್ದಾನೆಂದು ಅದಕ್ಕೆ ನಾನು ಹೇಳಿದ್ದು. ನಿಮಗೆ ಕೇಂದ್ರ ಸರ್ಕಾರದ ಆದೇಶ

ಬಂದಿದೆಯೋ ಏನೋ ನನಗೆ ಗೊತ್ತಿಲ್ಲ. ನನಗೆ ಬಂದಿಲ್ಲ. ೨೦೧೦-೧೪ಕ್ಕೆ ಕಟ್ ಆಫ್ ಡೇಟ್ ಮಾಡಿ ಡಿಫಾಲ್ಟರ್ಸ್ ಯಾರಿದ್ದಾರೆ ಅವರಿಗೆ ಮಾತ್ರ ಇದು ಅನ್ವಯವಾಗುತ್ತದೆಂದು ಕೇಂದ್ರ ಸರ್ಕಾರ ಆದೇಶ ಮಾಡಿದ್ದರೆ ಪ್ರಧಾನಮಂತ್ರಿಗಳ ಮನೆಯ ಮುಂದೆ ನಾನು ಬದುಕಿರುವಷ್ಟರಲ್ಲಿಗೂ ಉಪವಾಸ ಕುಳಿತಿರುತ್ತೇನೆ. ಏಕೆಂದರೆ ಇದು ರೈತರಿಗೆ ದ್ರೋಹ ಮಾಡಿದಂತಾಗುತ್ತದೆ. ೨೦೧೦-೧೪ಕ್ಕೆ ಕಟ್ ಆಫ್ ಡೇಟ್ ಎಂದು ಮಾಡಿ ಡಿಫಾಲ್ಟರ್ಸ್ ಎನ್ನುವ ಶಬ್ದ ಉಪಯೋಗಿಸಿದ್ದರೆ ನಮ್ಮ ದೇಶದ ಏತಕ್ಕೂ ಇಡೀ ಪ್ರಪಂಚದ ಯಾವ ರೈತರ ಸಾಲವೂ ಮನ್ನಾ ಆಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಾದ ಚಂದ್ರೇಗೌಡರಿಗೆ ಈ ಅಂಕಿ ಅಂಶಗಳು ಗೊತ್ತಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದ ಸರ್ಕ್ಯುಲರ್‌ನಲ್ಲಿ ೨೦೧೦-೧೪ಕ್ಕೆ ಡಿಫಾಲ್ಟರ್ಸ್ ಎಂದು ಇರದಿದ್ದರೆ ಸರಿ. ಎಲ್ಲ ರೈತರ ಸಾಲವನ್ನೂ ಮನ್ನಾ ಮಾಡಬೇಕು. ನಾನು ಹೇಳುವುದೇನೆಂದರೆ ೨೦೧೦-೧೪ಕ್ಕೆ ಯಾರು ೧೫ ಸಾವಿರ ರೂಪಾಯಿ ೨೦ ಸಾವಿರ ರೂಪಾಯಿ ಹೀಗೆ ಸಾಲ ಪಡೆದಿದ್ದಾರೆ, ಅದರಲ್ಲಿ ೧೦ ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ? ಎಲ್ಲರ ಸಾಲ ಮನ್ನಾ ಮಾಡುವುದಕ್ಕೆ ಹಣಕಾಸಿನ ಭಾರ ಜಾಸ್ತಿ ಬೀಳುತ್ತದೆಯೇ ? ಕೇಂದ್ರ ಸರ್ಕಾರದ ಕಂಡೀಷನ್ ಮೇಲೆ ೧೦ ಸಾವಿರ ರೂಪಾಯಿಗಳ ಸಾಲ ಮನ್ನಾ ಮಾಡಿದರೆ ನಪಂಗೆ ಎಷ್ಟು ಭಾರ ಬೀಳುತ್ತದೆಂಬುದನ್ನು ತಾವು ತಿಳಿಸಬೇಕು ಈ ರೀತಿ ಸಾಲ ಮನ್ನಾ ಮಾಡಿದರೆ ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಭಾರ ಬೀಳುತ್ತದೆಂಬುದನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಬೇಕು. ಮಾನ್ಯ ಚಂದ್ರೇಗೌಡರು ಪ್ರಭಾವಿ ನಾಯಕರು ಇದ್ದಾರೆ, ಹಿರಿಯ ಸದಸ್ಯರಾದ ಮಾನ್ಯ ರಾಮಕೃಷ್ಣ ಹೆಗಡೆಯವರು ಯೋಜನಾ ಆಯೋಗದಲ್ಲಿರುವಂತಹ ಸಂದರ್ಭದಲ್ಲಿ ಅವರಿಗೆ ನಮ್ಮ ರಾಜ್ಯದ ಪರಿಸ್ಥಿತಿ ಚೆನ್ನಾಗಿ ಗೊತ್ತಿದೆ. ನಮ್ಮ ರಾಜ್ಯ ಸಾಲ್ಕೈದು ವರ್ಷಗಳಿಂದ ಭೀಕರ ಬರಗಾಲಕ್ಕೆ ತುತ್ತಾಗಿತ್ತು. ಆದ್ದರಿಂದ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸುವಂತಹ ಕೆಲಸವನ್ನು ಅವರು ಮಾಡಬೇಕೆಂದು ಹೇಳುತ್ತೇನೆ.

ಈ ರೀತಿಯಿಂದ ನಾವು ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಿಯೋಗ ಹೋಗಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಹಣಕಾಸಿನ ಸಚಿವರ ಮನವೊಲಿಸಬೇಕಾದ ಅಗತ್ಯ ಇದೆ. ಈ ಒಂದು ಪ್ರಯತ್ನವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಎರಡನೆಯದು, ಕಳೆದು ಸಾಲ್ಕೈದು ತಿಂಗಳಿಂದ ಸತತವಾಗಿ ಈ ರೀತಿ ಕೂಗಿದರೂ ಸಹ ಏನೂ ಆಗಲಿಲ್ಲ ಅತ್ಯಂತ ನೋವಿನಿಂದ ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ಏನೆಂದರೆ, ತಾವು ಏಕೆ ರೈತರ ಬಗ್ಗೆ ಇಷ್ಟೊಂದು ಬಿಗಿ ನಿಲುವನ್ನು ತೆಗೆದುಕೊಳ್ಳುತ್ತಿದ್ದೀರಿ? ಈ ಕಲ್ಲು ಹೃದಯ ನಿಮಗೆ ಏಕೆ? ಈ ಬಗ್ಗೆ ಈ ಸದನದಲ್ಲಿ ಎರಡು-ಮೂರು ಸಲ ದೀರ್ಘವಾದ ಚರ್ಚೆಯಾಯಿತು. ನಿಮ್ಮ ಮಾತಿಗೆ ಬೆಲೆ ಕೊಟ್ಟು ನಾವು ಎದ್ದುಹೋದೆವು. ವಿರೋಧ ಪಕ್ಷದ ನಾಯಕರುಗಳ ಒಂದು ನಿಯೋಗವನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದಿರಿ. ಆಮೇಲೆ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದೀರಿ. ನಾವು ಕರೆದುಕೊಂಡು ಹೋಗುವುದಕ್ಕೆ ಸಿದ್ಧರಿದ್ದರೂ ಸಹ ಯಾರೂ ಬರಲಿಲ್ಲ ಎಂದು. ನಾವು ಬರುವುದಿಲ್ಲವೆಂದು ಹೇಳಿದ್ದೀವಾ ಸ್ವಾಮಿ? ನಾವು ಹೇಳಿದ್ದು ಹೋಗುವುದಕ್ಕೆ ಮುಂಚೆ ಒಂದು ಸಭೆ ಕರೆಯಿರಿ. ಆ ಸಭೆಯಲ್ಲಿ ನಮ್ಮದೇ ಆದ ಕಾಂಕ್ರೀಟ್ ಪ್ರಪೋಸಲ್ಸ್ ಬಗ್ಗೆ ತೀರ್ಮಾನ ಮಾಡಿ ಅದನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗೋಣ. ನೀವು ಸಾಲ ಮನ್ನಾ ಮಾಡುವುದಾದರೆ ನಮ್ಮ ಸರ್ಕಾರದಿಂದ ನಾವು ಇಷ್ಟು ಕೊಡುತ್ತೇವೆ. ನೀವು ಇಷ್ಟು ಕೊಡಿ ಎಂದು ಏನಾದರೂ ಪ್ರಪೋಸಲ್ಸ್ ಇದ್ದರೆ ಆ ಬಗ್ಗೆ ಮಾತುಕತೆ ಆಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಿಮಗೆ ನಾವು ಸಲಹೆ ಕೊಟ್ಟೆವು ಈ ದೃಷ್ಟಿಯಿಂದ ವಿಚಾರ ಮಾಡಿ ವಿರೋಧ ಪಕ್ಷದ ನಾಯಕರ ನಿಯೋಗವನ್ನು ನೀವು ಕರೆದುಕೊಂಡು ಹೋಗಲಿಲ್ಲ ವಿರೋಧ ಪಕ್ಷದ ನಾಯಕರ ಸಭೆಯನ್ನೂ ಕರೆಯಲಿಲ್ಲ. ನಿಮ್ಮವರು ಲೋಕಸಭಾ ಸದಸ್ಯರು ೨೭ ಜನ ಇದ್ದರು. ಅವರನ್ನು ಕರೆದು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಆಗ್ರಹ ಮಾಡುವುದಕ್ಕೂ ಸಹ ತಾವು ಏನೂ ಪ್ರಯತ್ನ ಮಾಡಲಿಲ್ಲ. ನಿಮಗೆ ಏನೋ ಒಂದು ಇನ್‌ಫ್ಲುಯೆನ್ಸ್ ಇದೆ. ಶ್ರೀ ರಾಮಕೃಷ್ಣ ಹೆಗಡೆಯವರು ನಿಮ್ಮ ಸ್ನೇಹಿತರು ಇದ್ದಾರೆ. ನಮಗೂ ನಿಮಗೂ ರಾಜಕೀಯವಾಗಿ ಭಿನ್ನಾಭಿಪ್ರಾಯ ಇದ್ದರೂ ನೀವೂ ನಾವು ಒಂದೇ ಕಡೆ ಇದ್ದ ಚಿಕ್ಕಮಗಳೂರಿನಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಹೋರಾಟ ಮಾಡಿರತಕ್ಕಂಥವರು. ಈ ಒಳ್ಳೆಯ ಸಂಬಂಧ ಇದ್ದಾಗ ಕೇಂದ್ರ ಸರ್ಕಾರದ ಮನಸ್ಸನ್ನು ಒಲಿಸಿ ನಮ್ಮ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ ಎನ್ನುವುದನ್ನು ಮನದಟ್ಟು ಮಾಡಿ ಇಷ್ಟೆಲ್ಲ ಪೂರ್ಣ ಹಣವನ್ನು ಕೇಂದ್ರ ಸರ್ಕಾರ ತುಂಬಿ ಕೊಡುವ ಹಾಗೆ ನೀವು ಪ್ರಭಾವ ಬೀರಿದ್ದರೆ ನಾವು ಬೇಡವೆಂದು ಹೇಳುತ್ತಿದ್ದೆವಾ? ಅಥವಾ ನಿಮ್ಮ ಹಿಂದೆ ಬರುವುದಿಲ್ಲವೆಂದು ಹೇಳುತ್ತಿದ್ದೆವಾ? ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನೂ ನೀವು ಮಾಡಲಿಲ್ಲ. ಆದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸಮಯ ವಿಾರಿದರೆ ರೈತ ಉಳಿಯುವ ಪರಿಸ್ಥಿತಿಯಲ್ಲಿಲ್ಲ. ರೈತನಿಗೆ ಗೊಬ್ಬರ, ಬಿತ್ತನೆ ಬೀಜ ಬೇಕಾಗಿದೆ. ಒಳ್ಳೆಯ ಬೆಳೆ ಬೆಳೆಯಬೇಕಾಗಿದೆ. ಅದಕ್ಕಾಗಿ ತಾವು ಇವತ್ತು ೨–೧೦–೯೯ರಲ್ಲಿರುವಂಥ ಎಲ್ಲ ರೈತರ ಮೊದಲನೇ ೧೦ ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡುವಂಥ ಧೈರ್ಯವಾದ ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕು. ಹಾಗೆಯೇ ಈ ರಾಜ್ಯದ ರೈತರ ಸಾಲದ ವಸೂಲಾತಿ ಏನು ಮಾಡುತ್ತಿದ್ದಾರೆ, ಅದಕ್ಕೆ ತಡೆಯಾಜ್ಞೆ ಕೊಟ್ಟು ವಸೂಲಿ ಮಾಡಿದ ಹಣವನ್ನು ಹಿಂದಕ್ಕೆ ಕೊಡಬೇಕು. ತಮಗೆ ಗೊತ್ತಿರಬಹುದು. ದಯವಿಟ್ಟು ಆಂಕಿ ಅಂಶಗಳನ್ನು ಬೇಕಾದರೆ ತರಿಸಿ ನೋಡಿ. ಇಡೀ ದೇಶದಲ್ಲಿ, ಯಾವ ರಾಜ್ಯದಲ್ಲೂ ಸಹ ಸಹಕಾರ ಸಂಘದಿಂದ ಸಾಲ ಪಡೆದಿರ ತಕ್ಕಂಥದ್ದರಲ್ಲಿ ಶೇಕಡಾ ೪–೫ ಭಾಗ ಸಹ ವಸೂಲಿ ಆಗಿಲ್ಲ, ತಾವು ಮೀಲಿಂದ ಮೇಲೆ ಹೇಳಿಕೆ ಕೊಟ್ಟಿದ್ದರಿ ಪರಿಣಾಮವಾಗಿ ಬಲಾತ್ಕಾರದಿಂದ ಸಹಕಾರ ಸಂಘದ ಅಧಿಕಾರಿಗಳು ಹಣ ವಸೂಲು ಮಾಡಿದ್ದ ಪರಿಣಾಮವಾಗಿ ಇವತ್ತು ಶೇಕಡಾ ೧೪–೧೫ ಪರ್ಸೆಂಟ್‌ನಷ್ಟು ಕರಾಬಡ ರೈತರಿಂದ ಸಾಲ ವಸೂಲು ಮಾಡುವುದರಲ್ಲಿ ತಾವು ಯಶಸ್ವಿಯಾಗಿದ್ದೀರಿ. ಇದು ಬಹಳ ಅನ್ಯಾಯವಾಗಿದೆ. ಇದರ ಜೊತೆಗೆ ನಾನು ಹೇಳಬೇಕಾಗುತ್ತದೆ. ಏನೆಂದರೆ ನಾಳೆ ತಾವು ಒಂದು ತೀರ್ಮಾನಕ್ಕೆ ಬಂದು ಇಲ್ಲವೇ ದೊಡ್ಡ ಮನಸ್ಸನ್ನು ಮಾಡಿ ಈ ರೀತಿ ಮೊದಲನೇ ೧೦ ಸಾವಿರ ಸಾಲ ಮನ್ನಾ ಮಾಡುವಂಥ ತೀರ್ಮಾನವನ್ನು ತೆಗೆದುಕೊಂಡಾಗ ಯಾರಾದರೂ ಈ ರೀತಿ ಬಲಾತ್ಕಾರದಿಂದ ರಿಪೇಮೆಂಟ್ ಮಾಡಿದ್ದರೆ ಅಥವಾ ಬೇರೆ ಕಾರಣಕ್ಕೆ ಬಲಾತ್ಕಾರಕ್ಕೆ ಬಲಿಯಾಗಿ ಅವರು ಕೊಟ್ಟಂಥ ಬಾಕಿ ಹಣವನ್ನು ವಾಪಸ್ ಕೊಡುವಂಥ ಕಾರ್ಯಕ್ರಮವನ್ನು ತಾವು ರೂಪಿಸಬೇಕು ರೈತನ ಸಾಲ ಮನ್ನಾ ಮಾಡುವುದರಿಂದ ಆತ ಋಣಮುಕ್ತನಾಗುತ್ತಾನೆ. ಅವನ ಕಾಲ ಮೇಲೆ ಅವನು ನಿಲ್ಲುತ್ತಾನೆ, ಆತ ಸ್ವಲ್ಪ ನೆಮ್ಮದಿಯಿಂದ ನಿಟ್ಟುಸಿರು ಬಿಡಬಹುದು ಅಷ್ಟೆ. ಮೊನ್ನೆ ದಿವಸ ಒಂದು ಘಟನೆ ನಡೆದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಮೂಲಕ ಸರ್ಟಿಫೈಡ್ ಸೀಡ್ಸ್ ಅಂತ ಹೇಳಿ ೫೫೦ ರೂಪಾಯಿ ದರದಲ್ಲಿ ಭತ್ತವನ್ನು ವಿತರಿಸಿದರು. ೫೫೦ ರೂಪಾಯಿನಂತೆ ರೈತನಿಗೆ ಫೌಂಡೇಶನ್ ಸೀಡ್ಸ್ ಅಂತ ಹೇಳಿ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಶ್ರೀ ಬಂಗಾರಪ್ಪನವರಿಗೆ ಗೊತ್ತಿರಬಹುದು. ತಾವು ಬೇಕಾದರೆ ಈಗಲೇ ಟೆಲಿಕ್ಸ್ ಮೂಲಕ ಕೇಳಿ ತೀರ್ಮಾನಿಸಿಕೊಳ್ಳಬಹುದು. ಇಡೀ ಶಿವಮೊಗ್ಗ ಜಿಲ್ಲೆಯಲ್ಲಿ ೨೭೦೦ರಿಂದ ೨೮೦ ರೂಪಾಯಿಗೆ ಒಂದು ಕ್ವಿಂಟಾಲ್‌ನಂತೆ ಎಷ್ಟು ಬೇಕಾದರೂ ಭತ್ತ ಸಿಗುತ್ತದೆ. ಆದರೆ ಇವತ್ತು ಅದೇ ಭತ್ತವನ್ನು ಸರ್ಟಿಫೈಡ್ ಸೀಡ್ಸ್ ಎಂದು ಹೇಳಿ ೫೫೦ ರೂಪಾಯಿನಂತೆ ಮಾರಿದಿರಿ, ತಾವು ಹೇಳುತ್ತೀರಿ ಅವನಿಗೆ ಸಬ್ಸಿಡಿ ಕೊಟ್ಟಿದ್ದೇವೆ ಅಂತ, ಅದು ಕೊಡುವುದು ಕ್ವಿಂಟಾಲ್‌ಗೆ ೨೦೦ ರೂಪಾಯಿ. ಬಹಿರಂಗ ಮಾರುಕಟ್ಟೆಯಲ್ಲಿ ೨೭೦–೨೮೦ ರೂಪಾಯಿನಂತೆ ಎಷ್ಟು ಸಾವಿರ ಕ್ವಿಂಟಾಲ್ ಬೇಕಾದರೂ ಭತ್ತ ಸಿಗುತ್ತದೆ. ಹೀಗೆ ಸುಲಭವಾಗಿ ಸಿಗುವ ಸಂದರ್ಭದಲ್ಲಿ ನೀವು ೫೫೦ ರೂಪಾಯಿಗೆ ಕೊಟ್ಟು ಸಬ್ಸಿಡಿ ರೇಟ್ ಅಂತ ೨೦೦ ರೂಪಾಯಿ ಫಿಕ್ಸ್ ಮಾಡಿ ಕೊಟ್ಟಿದ್ದೇವೆ ಎಂದು ಹೇಳಿದರೆ ಅದು ಯಾರ ಜೇಬಿಗೆ ಹೋಗುತ್ತದೆ? ಅದು ಫೌಂಡೇಶನ್ ಸೀಡ್ಸ್ ಅಲ್ಲ. ಸರ್ಟಿಫೈಡ್ ಸೀಡ್ಸ್. ನನ್ನಂಥ ರೈತ ಬೆಳೆದದ್ದು. ೨೭೫–೨೮೦ ರೂಪಾಯಿಗೆ ಬಹಿರಂಗ ಮಾರುಕಟ್ಟೆಯಲ್ಲಿ ಈ ಭತ್ತ ಸಿಗಬೇಕಾದರೆ ಇವತ್ತು ೫೫೦ ರೂಪಾಯಿಗೆ ರೈತನಿಗೆ ಮಾರುತ್ತಿದ್ದಾರೆ ಎಂದರೆ ಇದು ರೈತನಿಗೆ ನಾವು ದ್ರೋಹ ಮಾಡಿದಂತೆ ಆಗುವುದಿಲ್ಲವೇ? ಇದು ಸರಿಯೇ? ಮೊನ್ನೆ ಶ್ರೀ ಬಂಗಾರಪ್ಪನವರು ಸಚಿವರಾಗಿ ನೇಮಕವಾದ ಮೇಲೆ ಮಾರುಕಟ್ಟೆಯಲ್ಲಿ ೧೩೦ ರೂಪಾಯಿಗೆ ಕೊಂಡುಕೊಳ್ಳುವ ಡಿ.ಎ.ಪಿ. ಹತ್ತಿ ಸೀಡ್ಸ್‌ನ್ನು ೧೪೦ ರೂಪಾಯಿಗೆ ಹೆಚ್ಚು ಮಾಡಿದರು ಆದರೆ ಇವತ್ತು ಬಹಿರಂಗವಾಗಿ ಕೆ.ಜಿ. ಹತ್ತಿಯನ್ನು ಎಷ್ಟಕ್ಕೆ ಮಾರಾಟ ಮಾಡುತ್ತಿದ್ದಾರೆ?

ಇವತ್ತು ಬಹಿರಂಗ ಮಾರುಕಟ್ಟೆಯಲ್ಲಿ ಇನ್ನೂರು ರೂಪಾಯಿಗೆ ಮಾರುತ್ತಿದ್ದೀರಿ, ೧೮೦ ರೂಪಾಯಿಗೆ ಮಾರುತ್ತಿದ್ದೀರಿ. ೧೪೦ಕ್ಕೆ ಮಾರಿದರೂ ಸಹಿತ ಇದುವರೆಗೆ ನನಗೆ ಸಿಕ್ಕಿರುವ ಅಂಕಿಅಂಶಗಳ ಪ್ರಕಾರ ೯ ಸಾವಿರ ಕ್ವಿಂಟಾಲ್ ಹತ್ತಿ ಮಾರಾಟವಾಗಿದೆ. ಈ ಹತ್ತಿಯಲ್ಲಿ ರೈತನ ತಲೆಬೋಳಿಸಿ ಬಂದಿರತಕ್ಕ ಲಾಭ ೩ ಕೋಟಿ ೬೦ ಲಕ್ಷ ಡಿಸಿಪೆಚ್ ಹತ್ತಿ ಬೆಲೆ ಕೆ.ಜಿ ಗೆ ೧೩೦ ಇದ್ದುದನ್ನು ೧೪೦ಕ್ಕೆ ಕೊಂಡಿದ್ದೀರಿ. ಇದನ್ನು ೧೫೫ಕ್ಕೆ ರೈತರಿಗೆ ಮಾರಿದರೂ ನಾನು ಬೇಜಾರು ಮಾಡಿಕೊಳ್ಳುವುದಿಲ್ಲ. ಆದರೆ ೧೮೦ಕ್ಕೆ ಮಾರುತ್ತಿದ್ದೀರಿ. ಏತಕ್ಕೋಸ್ಕರ ಈ ಅನ್ಯಾಯ ಮಾಡುತ್ತಿದ್ದೀರಿ. ರೈತರಿಗೆ ಮೋಸ ಮಾಡಿದ್ದರಿಂದ ೩ ಕೋಟಿ ೬೦ ಲಕ್ಷ ಸರ್ಕಾರಕ್ಕೆ ಲಾಭವಾಯಿತು. ಇದು ಯಾವ ಶೋಷಣೆ. ಮತ್ತೆ ರಾಗಿ ಬಗ್ಗೆ ೧೪೦ ರೂಪಾಯಿ ಬೆಂಬಲ ಬೆಲೆ ಘೋಷಣೆ ಮಾಡಿದ್ದೀರಿ. ಇದು ತಪ್ಪಗೂ ಗೊತ್ತಿದೆ, ಇಡೀ ರಾಜ್ಯದಲ್ಲಿ ತಾವು ಪ್ರವಾಸ ಮಾಡಿ ಬಂದಿದ್ದೀರಿ. ಇವತ್ತು ಬಹಿರಂಗ ಮಾರುಕಟ್ಟೆಯಲ್ಲಿ ೧೪೦ ರೂಪಾಯಿಗಳಿಗೆ ಕೇಳುವವರು ಇಲ್ಲ. ಬೆಂಬಲ ಬೆಲೆ ೧೪೦ ರಂತೆ ಘೋಷಣೆ ಮಾಡಿದ ಮೇಲೆ ಸರ್ಕಾರ ಕೊಳ್ಳುವಂಥ ವ್ಯವಸ್ಥೆ ಮಾಡಿದೆಯೇ ? ಇಂತಹ ನೂರಾರು ಉದಾಹರಣೆ ಕೊಡಬಲ್ಲೆ. ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಯಾವುದೇ ಒಂದು ರಾಜಕೀಯ

ಭಿನ್ನಾಭಿಪ್ರಾಯ ಇಲ್ಲದೆ ತಾವು ಬಿಚ್ಚು ಮನಸ್ಸಿನಿಂದ ಚರ್ಚೆ ಮಾಡಿ ಇವತ್ತು ಕೇಂದ್ರಸರ್ಕಾರ ಏನೇ ನಿಲುವು ತೆಗೆದುಕೊಳ್ಳಲಿ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರ ಇದೆ. ಈ ರಾಜ್ಯದ ಜನತೆಯ ಪರವಾಗಿ ನಾವೂ ನಿಮ್ಮ ಜೊತೆಯಲ್ಲಿ ಬರುತ್ತೇವೆ. ನಿಮ್ಮ ಜೊತೆ ಸೇರಿಕೊಂಡು ಹೋರಾಟ ಮಾಡುವುದಕ್ಕೆ ಸಿದ್ಧವಿದ್ದೇವೆ. ಕೇಂದ್ರಸರ್ಕಾರ ಹೇಳಿದ ಮಾತನ್ನೇ ಒಪ್ಪಿಕೊಳ್ಳಬೇಕೆಂದು ಏನೂ ಇಲ್ಲ. ಇವತ್ತು ಮಧ್ಯಪ್ರದೇಶ ಮತ್ತು ಇತರೇ ರಾಜ್ಯಸರ್ಕಾರಗಳು ಪ್ರಧಾನಿಯವರ ಜೊತೆ ಮಾತನಾಡಿ ಅವರು ಕೊಟ್ಟ ಪ್ರಪೋಸಲ್ ಅನ್ನು ಒಪ್ಪಿದ್ದಾರೆ. ಮಧ್ಯಪ್ರದೇಶ ಸರ್ಕಾರ ಇವತ್ತು ೧೦ ಸಾವಿರ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡುವಂತಹ ಈ ಸಂದರ್ಭದಲ್ಲಿ ತಾವು ಸಹ ಈ ರಾಜ್ಯದ ರೈತನ ಸಾಲವನ್ನು ವಜಾ ಮಾಡಿ ಋಣಮುಕ್ತರನ್ನಾಗಿ ಮಾಡಬೇಕು. ಈ ರಾಜ್ಯದ ರೈತನ ೧೦ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುವಂಥ ಧೈರ್ಯ ತಮಗೆ ಇದ್ದರೆ, ರಾಜಾಸ್ಥಾನ, ಮಧ್ಯ ಪ್ರದೇಶ ಸರ್ಕಾರಗಳು ತೆಗೆದುಕೊಳ್ಳಿತಕ್ಕ ನಿಲುವಿಗೆ ತಾವು ಬದ್ಧರಾಗಿರಬೇಕು. ಆವರಂತೆ ನಾವೂ ಮಾಡಬೇಕು. ಇದರಿಂದ ಇಡೀ ರಾಜ್ಯದ ರೈತರನ್ನು ಋಣಮುಕ್ತರನ್ನಾಗಿ ಮಾಡುವುದಕ್ಕೆ ಸಾಧ್ಯವಿದೆ, ಇದರಿಂದ ಅವನ ಕಾಲಮೇಲೆ ಅವನು ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ನನ್ನ ನಿಲುವನ್ನು ಸ್ಪಷ್ಟ ಮಾಡಿದ್ದೇನೆ. ದಯಮಾಡಿ, ಇವತ್ತೇ ರೈತನ ಸಾಲದ ವಸೂಲಾತಿಗೆ ತಡೆಯಾಜ್ಞೆ ಕೊಟ್ಟು. ವಿಚಾರ ಮಾಡಿ, ಒಂದೆರಡು ದಿವಸದೊಳಗೆ ಪೂರು ಸಾಲದ ವ್ಯವಸ್ಥೆ ಮಾಡುವಂಥ ಕಾರ್ಯಕ್ರಮವನ್ನು ತಾವು ರೂಪಿಸಬೇಕೆಂದು ಅತ್ಯಂತ ವಿನಯದಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷೆಣಿಯರು.—ಈಗ ಶ್ರೀ ಎ. ರುಕ್ಮಯ್ಯ ಪೂಜಾರಿ ಅವರು ಮಾತನಾಡಬಹುದು. ಈ ವಿಷಯವನ್ನು ಇವತ್ತು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ, ದಯಮಾಡಿ ಇದನ್ನು ಮುಂದಕ್ಕೆ ಹಾಕಿ, ಇದು ಬಹಳ ಪ್ರಾಮುಖ್ಯವಾದ ವಿಚಾರ. ನಾಳೆ ಒಂದು ದಿವಸ ಅವಕಾಶ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದೊಂದು ದಿವಸ ನಿಧಾನವಾದರೂ ಆ ರೈತ ಬೀದಿ ಪಾಲಾಗುತ್ತಾನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ನಾಳೆಗೆ ಇದನ್ನು ಮುಂದುವರಿಸುವುದಕ್ಕೆ ಸರ್ಕಾರದ ಒಪ್ಪಿಗೆಯಾಗಿದೆ ಎಂದು ಕಾಣುತ್ತದೆ. ಸಭಾ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಇದು ಅಲ್ಪ ಕಾಲಾವಧಿ ಚರ್ಚೆಯಾದರೆ ಬಗೆಹರಿಯುವುದಿಲ್ಲ. ಇದು ಸ್ವಲ್ಪ ದೀರ್ಘ ಕಾಲಾವಧಿ ಚರ್ಚೆಯಾಗಬೇಕು. ನಾವೆಲ್ಲರೂ ಮಾತನಾಡುವವರಿದ್ದೇವೆ, ಆದರೆ ಸಲುವಾಗಿ ಕಾಲ ಮೊಟಕು ಮಾಡುವ ಅವಶ್ಯಕತೆ ಇಲ್ಲ, ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡೋಣ.

ಶ್ರೀ ವೀರೇಂದ್ರಪಾಟೀಲ್.—ನಾಳೆ ಚರ್ಚೆ ಮಾಡುವುದಕ್ಕೆ ನನ್ನ ಅಡ್ಡಿ ಇಲ್ಲ, ನಾನು ಉಪಾಧ್ಯಕ್ಷೆಣಿಯರಿಗೆ ಸಲಹೆ ಮಾಡಿದ್ದೇನೆ. ಈಗ ಸಭೆ ಮುಗಿಸುವುದಕ್ಕೆ ಮೊದಲು ಇನ್ನು ೫ ನಿಮಿಷ ವಾದರೂ ಪರವಾಯಿಲ್ಲ, ಇದು ೧೨೦ ಕೋಟಿಯಾಗಲೀ, ಅಥವಾ ೧೪೦ ಕೋಟಿಯಾಗಲೀ ಅಥವಾ ೧೬೦ ಕೋಟಿಯಾಗಲೀ, ನಮ್ಮ ಪಾಲಿನ ದುಡ್ಡು ಎಲ್ಲಿಂದ ಬರಬೇಕೆಂಬ ಬಗ್ಗೆ ಸಲಹೆ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಈ ರಾಜ್ಯದ ಮುಖ್ಯಮಂತ್ರಿಗಳು, ನಾನಂ ತಮ್ಮನ್ನು ಏನು ಕೇಳಿದೆನೆಂದರೆ, ಅಲ್ಪಾವಧಿ, ಮಧ್ಯಮಾವಧಿ ಸಾಲದ ಬಾಬ್ತು ೧-೧೦-೮೯ರವರೆಗೆ ಮೊದಲನೇ ಹಪ್ತು ಸಾವಿರವನ್ನು ಎಲ್ಲಾ ರೈತರಿಗೂ ಅನ್ವಯಮಾಡಿ ಮನ್ನಾ ಮಾಡಿದರೆ, ನಮ್ಮ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಭಾರ ಬೀಳುತ್ತದೆ ಎಂಬ ಅಂಕಿಅಂಶ ಕೊಡಿ, ನಾವು ಸಲಹೆ ಕೊಡುತ್ತೇವೆ. ನಾನು ಮೂರು ಸಲಹೆಗಳನ್ನು ಕೊಟ್ಟಿದ್ದೇನೆ, ಮೊದಲನೆಯದು, ಈ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡುವುದೂ ಸಹ ಅಭಿವೃದ್ಧಿ ಕಾರ್ಯ ಆಗುತ್ತದೆ ಎಂದು ಮನದಟ್ಟಾಗಿದ್ದರೆ, ತಮ್ಮ ಹತ್ತಿರ ಹಣ ಇಲ್ಲದಿದ್ದರೆ, ಮಧ್ಯಪ್ರದೇಶ ಸರ್ಕಾರದವರು ಯಾವರೀತಿ ಒಂದು ನೂರು ಕೋಟಿ ರೂಪಾಯಿಗಳನ್ನು ರಿಸರ್ವ್‌ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಆ ರೀತಿ ನೀವೂ ಕೂಡ ರೈತನ ಪರವಾಗಿ ಸಾಲ ತೆಗೆದುಕೊಳ್ಳಿ.

ಶ್ರೀ ವೀರೇಂದ್ರ ಪಾಟೀಲ್.—ಚರ್ಚೆ ನಾಳೆಗೆ ಮುಂದುವರಿಸಬೇಕೆಂದಾಗ, ಈಗ ಅವಸರ ಇಲ್ಲ. ಈ ಸಾಲ ಮನ್ನಾ ಮಾಡುವ ಬಗ್ಗೆ ತಾವು ಪದೇ ಪದೇ ಕೇಳುತ್ತಿದ್ದೀರಿ ಯಾವ ರೀತಿ ತಾವು ವ್ಯಾಖ್ಯಾನ ಮಾಡಿದ್ದೀರಿ, ಆ ವ್ಯಾಖ್ಯಾನದ ಪ್ರಕಾರ, ಬಹಳ ಪರಿಬಿರಿಯಲ್ಲಿ ಲೆಕ್ಕಾಚಾರ ಮಾಡಿದ ಪ್ರಕಾರ ದೀರ್ಘಾವಧಿ ಸಾಲ ಬಿಟ್ಟರೆ, ಕೇವಲ ಅಲ್ಪಾವಧಿ, ಮಧ್ಯಮಾವಧಿ ಸಾಲವೇ ಒಟ್ಟು ೫೫೦ ಕೋಟಿ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮೊದಲ ಹತ್ತು ಸಾವಿರಕ್ಕೆ ಎಷ್ಟಾಗುತ್ತದೆ.

ಶ್ರೀ ವೀರೇಂದ್ರಪಾಟೀಲ್.—ಫಸ್ಟ್ ಟೆನ್ ಥೌಸಂಡ್‌ಗೆ ಅಷ್ಟಾಗುತ್ತದೆ. ನಾಳೆ ಬೇಕಾದರೆ ಕರೆಕ್ಟ್ ಫಿಗರ್ ಹೇಳುತ್ತೇನೆ. ೩೩೦ ಕೋಟಿ ರೂಪಾಯಿಗಳಲ್ಲಿ ೧೧೫ ಕೋಟಿ ರೂಪಾಯಿಗಳನ್ನು ನಾವು ತರಬೇಕಾದರೆ, ಅದನ್ನು ಎಲ್ಲಿಂದ ತರಬೇಕು ಹೇಳಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನನಗೆ ಗೊತ್ತಿರುವ ಸಲಹೆಗಳನ್ನು ಕೊಟ್ಟಿದ್ದೇನೆ. ಮೊದಲನೆಯದು ಅಬಕಾರಿ ಇಲಾಖೆಯಲ್ಲಿ ತಮ್ಮ ಪ್ರಾಮಾಣಿಕ ಪ್ರಯತ್ನದಿಂದ ಪ್ರತಿನಿತ್ಯ ಸೋರಿ ಹೋಗುತ್ತಿದ್ದ ತೆರಿಗೆಯನ್ನು ಉಳಿಸುವ ಪ್ರಯತ್ನ ಮಾಡಿದ್ದೀರಿ. ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಆ ದುಡ್ಡಿನಲ್ಲಿ ನಾಲ್ಕಾಣೆ ಭಾಗವನ್ನಾದರೂ ಇದಕ್ಕೆ ಉಪಯೋಗ ಮಾಡಿಕೊಳ್ಳುವುದು ಸರಿ ಎಂದು ತಮಗೆ ಅನಿಸಿದರೆ ಆ ದುಡ್ಡನ್ನು ತೆಗೆದು ಇದಕ್ಕೋಸ್ಕರ ಕೊಡಿ. ಅದೂ ಆಗಲಿಲ್ಲ ಎಂದರೆ, ತಾವು ಸಾರಿಗೆ ದರವನ್ನು ಜಾಸ್ತಿ ಮಾಡಿದ್ದೀರಿ. ಅದರಲ್ಲಿ ಬರುವ ಲಾಭದಲ್ಲಿ ಇದಕ್ಕೆ ಸ್ವಲ್ಪ ಕೊಡಿ. ಅದೂ ಆಗಲಿಲ್ಲ ಅಂದರೆ ತಾವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ತಂದು ಕಂತುಗಳಲ್ಲಿ ವಾಪಸ್ ಕೊಡುವ ಪ್ರಯತ್ನ ಮಾಡಿ. ಅದೂ ಆಗಲಿಲ್ಲ ಎಂದರೆ ಕೇಂದ್ರ ಸರಕಾರದ ಹತ್ತಿರ ಹೋಗಿ ಈ ರೀತಿ ಕೇಂದ್ರ ಸರಕಾರದ ಆದೇಶದ ಮೇರೆಗೆ ರೈತರ ಸಾಲ ಮನ್ನಾ ಮಾಡಬೇಕಾಗಿದೆ, ಅದಕ್ಕೆ ದುಡ್ಡು ಬೇಕು ನಮ್ಮ ಹತ್ತಿರ ದುಡ್ಡಿಲ್ಲ, ಇದಕ್ಕಾಗಿ ಸಾಲ ಕೊಡಿ ಅಥವಾ ಬೇರೆ ಯಾವುದಾದರೂ ರೂಪದಲ್ಲಿ ನಮಗೆ ಹಣ ಕೊಡಿ, ಆಮೇಲೆ ಕಟ್ ಮಾಡಿಕೊಳ್ಳುವಿರಂತೆ ಇನ್‌ಸ್ಟಾಲ್‌ಮೆಂಟ್ ಬೇಸಿಸ್‌ನಲ್ಲಿ ರಿ-ಪೇಮೆಂಟ್ ಮಾಡುತ್ತೇವೆ ಕೊಡಿ ಎಂದು ಕೇಳಿ ತಾವು ಏನಾದರು ಮಾರ್ಗ ಹುಡುಕಿ ಮನಸ್ಸು ಮಾಡಿದರೆ ತಮಗೆ ಮಾರ್ಗಗಳು ಸಿಕ್ಕೇ ಸಿಗುತ್ತವೆ. ನಮ್ಮನ್ನು ಕೇಳಿದರೆ ನಾವು ಏನು ಮಾಡೋಣ. ನಮ್ಮನ್ನು ಅಲ್ಲಿ ಕೂರಿಸಿದರೆ ನಾವು ಮಾಡಿ ತೋರಿಸುತ್ತೇವೆ. ನಮ್ಮನ್ನು ಇಲ್ಲಿ ಕೂರಿಸಿ ಅದನ್ನು ಹೇಳಿದರೆ ನಾವು ಏನು ಮಾಡೋಣ.

ಶ್ರೀ ವೀರೇಂದ್ರ ಪಾಟೀಲ್.—ನಾನು ವಿತಕ್ಕೆ ತಮ್ಮ ಮಾಶಿಗೆ ಮಹತ್ವ ಕೊಟ್ಟು ಇಂಪಾರ್ಟೆನ್ಸ್ ಕೊಟ್ಟು ಕೇಳುತ್ತಿದ್ದೇನೆ ಎಂಬುದನ್ನು ಅರ್ಥಮಾಡಿಕೊಳ್ಳಿ. ಇವತ್ತು ನಿಮ್ಮ ಬೆಂಬಲದ ಮೇಲೆ ನ್ಯಾಷನಲ್ ಫ್ರಂಟ್ ಗೌರ್ನಮೆಂಟ್‌ನ ಭವಿಷ್ಯ ನಿರ್ಧಾರವಾಗಿದೆ, ಅದಕ್ಕಾಗಿ ನೀವು ಹೇಳುವಂತಹದು ನ್ಯಾಷನಲ್ ಫ್ರಂಟ್ ಗೌರ್ನಮೆಂಟ್‌ಗೆ ವೇದವಾಕ್ಯ ಆಗುವುದಕ್ಕೆ ಸಾಧ್ಯ ಇದೆ. ನೀವು ಹೇಳಿದರಲ್ಲ ಇದರ ಖರ್ಚು ೨೨೦ ಕೋಟಿ ಬರುತ್ತದೆ, ೨೫೦ ಕೋಟಿ ಬರುತ್ತದೆ ಅದೇನು ಬರುತ್ತದ. ಆದೆತ್ತ ಬರುತ್ತದೆ ಎಂಬುದು ಚರ್ಚೆಯಲ್ಲಿ ಬರುತ್ತದೆ. ಆದರೆ ಈಗಿನ ನಮ್ಮ ಡೆಫಿಸಿಟ್ ಏನು ನಮ್ಮ ಜವಾಬ್ದಾರಿ ಏನು ಕಾವೇರಿ ಕೃಷ್ಣಾ ಯೋಜನೆಗಳ ನೀರನ್ನು ಉಪಯೋಗ ಮಾಡುವುದಕ್ಕೆ ಖರ್ಚು ಮಾಡಿದ ಮೇಲೆ ಆದೇನು ಹಣ ಉಳಿಯುತ್ತದೆ, ಎಂಬುದನ್ನೆಲ್ಲಾ ಹೇಳುತ್ತೇನೆ, ಅದರಲ್ಲಿ ಏನೂ ಹಣ ಉಳಿಯುವುದಿಲ್ಲ. ಸಾರಿಗೆದು ಹೇಳಿದಿರಿ. ಈಗಾಗಲೇ ಎಲ್ಲದರ ಬಗ್ಗೆ ಚರ್ಚೆ ಮಾಡಿದ್ದೇವೆ. ಹೆಚ್ಚು ಮಾಡಿದ್ದನ್ನು ಅದಕ್ಕೆ ಹಾಕಿದರೂ ಕೂಡಾ ಇನ್ನೂ ೩೨-೩೫ ಕೋಟಿ ರೂಪಾಯಿ ಖೋತಾ ಆಗುತ್ತದೆ, ಆ ಖೋತಾವನ್ನು ತುಂಬುವುದಕ್ಕೆ ಆಗುವುದಿಲ್ಲ. ಇನ್ನು ಒಂದೇ ಒಂದು ನೀವು ಹೇಳಿದ್ದು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲ ತೆಗೆದುಕೊಳ್ಳಿ ಎಂದು ಹಾಗೂ ಕೇಂದ್ರ ಸಹಕಾರದಿಂದ ಇಂಟರೆಸ್ಟ್ ಫ್ರೀ ಲೋನ್ ತೆಗೆದುಕೊಳ್ಳಿ ಎಂದು ಅದನ್ನು ನೀವು ಕೊಡಿಸುವುದಕ್ಕೆ ಸಂಪೂರ್ಣವಾಗಿ ನಿಮ್ಮ ಪ್ರಭಾವ ಬೀರುವುದಕ್ಕೆ ಸಾಧ್ಯ ಇದೆಯೇ ಎಂಬುದನ್ನು ಹೇಳಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾಳೆ ಇದರ ಬಗ್ಗೆ ಚರ್ಚೆ ಮಾಡುವಾಗ ನಾನು ಯೋಚನೆ ಮಾಡಿ ಸಲಹೆ ಕೊಡುತ್ತೇನೆ. ನಾಳೆ ಇಲ್ಲಿಗೆ ನಮ್ಮ ಪಕ್ಷದ ಅಖಿಲ ಭಾರತೀಯ ಅಧ್ಯಕ್ಷರಾದ ಅಡ್ವಾಣಿಯವರು ಬರುತ್ತಿದ್ದಾರೆ. ಅವರ ಜೊತೆ ಕಂಪ್ಲೀಟ್ ಚರ್ಚೆ ಮಾಡಿ ನಮ್ಮ ರಾಜ್ಯದಲ್ಲಿ ಏನು ಮಾಡುತ್ತಿದ್ದೇವೆ ಎಂದು ಹೇಳುತ್ತೇವೆ. ಅಧಿಕಾರದಲ್ಲಿರುವವರ ಮೇಲೆ ಆರೋಪ ಮಾಡುವುದು ಸುಲಭ. ನಾವು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಪ್ರಾಮಾಣಿಕವಾದ ಸಲಹೆಗಳನ್ನು ಖಂಡಿತಾ ಕೊಡುತ್ತೇನೆ. ನಾಳೆ ಮಧ್ಯಾಹ್ನ ಖಂಡಿತಾ ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಯಡಿಯೂರಪ್ಪನವರೇ ಒಂದೇ ಒಂದು ವಿಚಾರ, ಈಗ ಇಷ್ಟು ಹಣ ಭರ್ತಿ ಮಾಡುವುದಕ್ಕೆ ದಾರಿ ಹುಡುಕಲು ಸ್ವಲ್ಪ ಸಲಹೆಗಳನ್ನು ಕೊಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಕೇಳಿದರು. ಇದಕ್ಕೆ ಒಂದೇಒಂದು ದಾರಿ ಇದೆ. ಕೇಂದ್ರ ಸರಕಾರ ಅಂದರೆ ನ್ಯಾಷನಲ್ ಫ್ರಂಟ್ ಗೌರ್ನಮೆಂಟ್ ನಿಮ್ಮ ಸಪೋರ್ಟ್ ಇಲ್ಲದೇ ಇರುವುದು ಸಾಧ್ಯವಿಲ್ಲ. ನಿಮ್ಮ ಪಕ್ಷದ ಬೆಂಬಲ ಇಲ್ಲದಿದ್ದರೆ ಆದರೆ ಅಸ್ತಿತ್ವ ಏನಾಗುತ್ತದೆ ಎಂಬುದಕ್ಕೆ ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ. ಪರಿಸ್ಥಿತಿ ಹಾಗಿದೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಕೂಡಾ ಇದು ಗೊತ್ತಿದೆ. ಹೀಗಿರುವುದರಿಂದ

ದಯವಿಟ್ಟು ನಿಮ್ಮ ನಾಲಿಗೆಯನ್ನು ಅಲ್ಲಿ ಚುರುಕು ಮಾಡಿಬಿಟ್ಟರೆ ವಿ.ಪಿ. ಸಿಂಗ್‌ರವರ ಸರಕಾರ ಒಪ್ಪಿಕೊಳ್ಳಲೇ ಬೇಕು. ೫೦ ಪರ್ಸೆಂಟ್ ಅಲ್ಲ, ೧೦೦ ಪರ್ಸೆಂಟ್‌ಗೂ ಅವರು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗೇನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ನಿಮ್ಮ ಪಕ್ಷದವರೇ ಆದ ಕೆಲವರಿಂದ ಏನು ಕಿರುಕುಳ ಆಗುತ್ತಿದೆ, ಅದು ಮುಂದುವರಿದರೆ ಅವರೇ ನಮ್ಮ ಕಡೆಗೆ ಬರುವ ಕಾಲ ಬಹಳ ಹತ್ತಿರ ಇದೆ. ಇದರಲ್ಲಿ ಅನುಮಾನ ಬೇಡ. ದೇಶ ಉಳಿಯಬೇಕಾದರೆ ಅವರು ಅಲ್ಲಿ ಬಿಟ್ಟು ನಮ್ಮ ಜೊತೆ ಬರಲೇ ಬೇಕಾಗುತ್ತದೆ. ನಾನು ತಮಾಷೆ ಮಾಡುತ್ತಿಲ್ಲ. ಬೇಕಾದರೆ ಡೇಟ್ ಟೈಪ್ ನೋಟ್ ಮಾಡಿಕೊಳ್ಳಿ. ಆ ದಿವಸ ಬೇಗ ಬರುತ್ತದೆ. ನಾಳೆ ಚರ್ಚೆ ಮುಂದುವರಿಸೋಣ.

ಶ್ರೀ ಎಸ್ ಬಂಗಾರಪ್ಪ.—ತಾವು ಇನ್ನೊಂದು ವಿಚಾರ ಹೇಳಿದಿರಿ, ಏನೆಂದರೆ ನಮ್ಮನ್ನು ಇಲ್ಲಿ ಕೂರಿಸಿಬಿಟ್ಟು ಹೇಗೆ ಮಾಡಬೇಕೆಂದು ಕೇಳುತ್ತೀರಿ ಎಂದು, ಏನು ಮಾಡುವುದು, ಜನರು ನಿಮ್ಮನ್ನು ಅಲ್ಲಿ ಕೂರಿಸಿದ್ದಾರೆ. ನಮ್ಮನ್ನು ಇಲ್ಲಿ ಕೂರಿಸಿದ್ದಾರೆ ಎಂಬ ಮಾತನ್ನು ಹೇಳಿದಿರಿ. ಆ ಕೆಲಸ ನಾವು ಮಾಡಿಲ್ಲ. ಕರ್ನಾಟಕ ರಾಜ್ಯದ ಜನತೆ ನಮ್ಮನ್ನು ಇಲ್ಲಿ ಕುಳಿತುಕೊಳ್ಳಿ ಎಂದು ಹೇಳಿದ್ದಾರೆ. ನಾವು ಕುಳಿತುಕೊಂಡಿದ್ದೇವೆ. ಬೇಡ ಎಂದು ಹೇಳಿದರೆ ಅಲ್ಲೇ ಕುಳಿತುಕೊಳ್ಳುತ್ತೇವೆ. ಇದೇನೂ ನಮಗೆ ಹೊಸದಲ್ಲ.

ನೀವು ಮಾತನಾಡುವಾಗ ನಾವು ಆಡಳಿತ ಪಕ್ಷದಲ್ಲಿ ಇದ್ದಿದ್ದರೆ ಇದನ್ನು ಜಾರಿ ಮಾಡುತ್ತಿದ್ದೆವು ಎನ್ನುವ ಮಾತನ್ನು ಸಹ ತಾವು ಹೇಳಿದಿರಿ. ಈ ಪ್ರಶ್ನೆಗೆ ಉತ್ತರ ಕೊಡುವವರು ನಾವು ಅಲ್ಲ ಕರ್ನಾಟಕ ರಾಜ್ಯದ ಜನತೆ ಆದ್ದರಿಂದ ನೀವು ಅವರನ್ನೇ ಕೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ದೇಶದಲ್ಲಿ ಏನೇನು ಆಗುತ್ತಿದೆ ಎನ್ನುವುದನ್ನು ತಾವು ನೋಡಿದ್ದೀರಿ...

ಉಪಾಧ್ಯಕ್ಷರು.—ಸಭೆಯನ್ನು ನಾನು ಈಗ ಮುಂದೂಡುತ್ತೇನೆ ಮತ್ತೆ ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಸಭೆ ಸೇರುವುದು.

(ಸದನವು ಸಾಯಂಕಾಲ ೬ ಘಂಟೆ ೧೨ ನಿಮಿಷಗಳಿಗೆ ಮುಕ್ತಾಯವಾಗಿ ಮತ್ತೆ ದಿನಾಂಕ ೭ನೇ ತಾರೀಖು ಗುರುವಾರ ಬೆಳಿಗ್ಗೆ ೧೧–೦೦ ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)